MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 26 | ಮಂಗಳವಾರ : 11-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 26 | TUESDAY : 11-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಜನರನ್ನು ಸರ್ಕಾರಿ ಕೆಲಸಗಳಿಗಾಗಿ ಅನಗತ್ಯವಾಗಿ ಅಲೆದಾಡಿಸುವುದನ್ನು ನಾನು ಸಹಿಸುವುದಿಲ್ಲ :ಸಿಎಂ



**ಮೈಸೂರು, ನ.10–** ಜನರನ್ನು ಸರ್ಕಾರಿ ಕೆಲಸಗಳಿಗಾಗಿ ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡಿಸುವುದನ್ನು ನಾನು ಸಹಿಸುವುದಿಲ್ಲ. ಈ ರೀತಿಯ ಧೋರಣೆ ಅಕ್ಷಮ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಚಾಟಿ ಬೀಸಿದ್ದಾರೆ. ಮೈಸೂರಿನಲ್ಲಿಂದು ಜಿಲ್ಲಾ ಕೆಡಿಪಿ ಸಭೆಯಲ್ಲಿ ಆರಂಭಿಕವಾಗಿ ಮಾತನಾಡಿದ ಅವರು, ಅಧಿಕಾರಿಗಳು ಜಿಲ್ಲಾ ಕೇಂದ್ರಗಳಲ್ಲೆ ವಾಸಿಸುತ್ತಿರುವುದೇಕೆ? ತಾಲ್ಲೂಕು ಕೇಂದ್ರಗಳಲ್ಲಿ ನೆಲೆಸಿ, ಜನರ ಸಮಸ್ಯೆ ಕೇಳದೇ ಇರುವ ಅಧಿಕಾರಿಗಳ ಬಗ್ಗೆ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಅಧಿಕಾರಿ ಮತ್ತು ಸಿಬ್ಬಂದಿ ಜನ ಸೇವೆ ಮಾಡುವುದಾಗಿ ಪ್ರಮಾಣ ಮಾಡಿ ಹುದ್ದೆ ಸ್ವೀಕರಿಸಿದ್ದಾರೆ. ಅದಕ್ಕೆ ಬದ್ಧರಾಗಿ ನಡೆದುಕೊಳ್ಳಬೇಕು. ಅನಗತ್ಯವಾಗಿ ಜನರನ್ನು ಅಲೆದಾಡಿಸಬಾರದು ಎಂದು ತರಾಟೆಗೆ ತೆಗೆದುಕೊಂಡರು. ಜನ ಪ್ರತಿನಿಧಿಗಳು ಐದು ವರ್ಷಕ್ಕೊಮೆ ಬರುವವರು, ಅಧಿಕಾರಿಗಳು ಶಾಶ್ವತವಾಗಿ ಇರುವವರು ಎನ್ನುವ ಭಾವನೆ ಬಿಟ್ಟು ಕೆಲಸ ಮಾಡಿ ಎಂದು ತಾಕೀತು ಮಾಡಿದರು. ಶಿಕ್ಷಣ ಸೂಚ್ಯಂಕದಲ್ಲಿ ಮೈಸೂರು ಜಿಲ್ಲೆ ಏಳನೇ ಸ್ಥಾನದಿಂದ ಹದಿನಾಲ್ಕನೇ ಸ್ಥಾನಕ್ಕೆ ಕುಸಿದಿರುವುದಕ್ಕೆ ಅಸಮಾಧಾನ ವ್ಯಕ್ತ ಪಡಿಸಿದ ಮುಖ್ಯಮಂತ್ರಿಯವರು ಮುಂದಿನ ದಿನಗಳಲ್ಲಿ ಜಿಲ್ಲೆಯ ಶೈಕ್ಷಣಿಕ ವಾತಾವರಣವನ್ನು ಸುಧಾರಣೆ ಮಾಡಿ ನಂ-1 ಸ್ಥಾನಕ್ಕೆ ತರಬೇಕು ಎಂದು ಎಚ್ಚರಿಸಿದರು.

ಹೊಸದಾಗಿ ಬಂದಿರುವ ಡಿಡಿಪಿಐ ಅವರು ಉತ್ತಮವಾಗಿ ಕೆಲಸ ಮಾಡಿ ಜಿಲ್ಲೆಯ ಫಲಿತಾಂಶವನ್ನು ಉತ್ತಮಗೊಳಿಸಬೇಕು. ಶೈಕ್ಷಣಿಕ ಪ್ರಗತಿಯ ಬಗ್ಗೆ ತಾವು ಗಮನಿಸುತ್ತಿರುವುದಾಗಿ ಹೇಳಿದ ಅವರು, ಎಸ್ಎಸ್ಎಲ್ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನೀಲ ನಕ್ಷೆ ತಯಾರಿಸಿ ನೀಡುವಂತೆ ಸೂಚಿಸಿದರು. ಮೈಸೂರು ಶಿಕ್ಷಣಕ್ಕೆ ಮೊದಲಿನಿಂದಲೂ ಅತ್ಯಂತ ಪ್ರಾಮುಖ್ಯ ನೀಡಿದ್ದ ಸಂಸ್ಥಾನ. ಇಲ್ಲೇ ಶಿಕ್ಷಣ ಸೂಚ್ಯಂಕದಲ್ಲಿ ಏಳರಿಂದ ಹದಿನಾಲ್ಕನೇ ಸ್ಥಾನಕ್ಕೆ ಕುಸಿದಿರುವುದು ಸರಿಯಲ್ಲ. ಶೀಪ್ರದಲ್ಲೇ? ಪರಿಸ್ಥಿತಿ ಸುಧಾರಿಸಬೇಕು ಎಂದು ಸೂಚನೆ ನೀಡಿದರು.

ವರ್ಗಾವಣೆಗೆ ಅಧಿಕಾರಿ ಮತ್ತು ಸಿಬ್ಬಂದಿಗಳು ನಮಗೆ ಹತ್ತಿರದ ಕಾರ್ಯಕರ್ತರನ್ನೆ ಕರೆದುಕೊಂಡು ಬರುತ್ತಿದ್ದಾರೆ. ಇದು ಕೆಟ್ಟ ನಡವಳಿಕೆ, ತಾವು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಸಭೆಯ ಆರಂಭದಲ್ಲೆ ಗೈರು ಆಗಿರುವ (2ನೇಪುಟಕ್ಕೆ..)

## ರಾಜ್ಯದ ಜೈಲುಗಳು ಉಗ್ರರ ಪಾಲಿಗೆ ಸ್ವರ್ಗವಾಗುತ್ತಿವೆ : ಅಶೋಕ್ ಅಕ್ರೋಶ



**ಬೆಂಗಳೂರು,ನ.10–** ರಾಜ್ಯದ ಜೈಲುಗಳು ಉಗ್ರರ ಪಾಲಿಗೆ ಸ್ವರ್ಗವಾಗುತ್ತಿವೆ. ಇವರಿಗೆ ಇಲ್ಲಿ ಫೈಸ್ಟಾರ್ ಹೋಟೆಲ್‌ಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸಕಲ ಸವಲತ್ತುಗಳು ಸಿಗುತ್ತಿವೆ. ವರದಿ ತರಿಸಿಕೊಳ್ಳುತ್ತೇನೆ ಎಂದು ಹೇಳುವ ಗೃಹಸಚಿವರು ಕತ್ತೆ ಕಾಯುತ್ತಾ ಇದ್ದರೇ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದ್ದಾರೆ.

ಪ್ರತಿಭಟನೆಯಲ್ಲಿ ಪಾಲ್ಗೊಂಡು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೈಲುಗಳಲ್ಲಿ ಉಗ್ರರಿಗೆ ಮೊಬೈಲ್, ಸ್ಯಾಟಲೈಟ್ ಫೋನ್, ಮಾಂಸ, ಮದ್ಯ, ಗಾಂಜಾ ಪ್ರತಿಯೊಂದು ಸಿಗುತ್ತದೆ. ಇವರು ಮನೆಯಲ್ಲಿರುವ ಬದಲು ಜೈಲಿನಲ್ಲೆ ವೈಭೋಗದ ಜೀವನ ನಡೆಸುತ್ತಿದ್ದಾರೆ. ಗೃಹ ಇಲಾಖೆ ಇದೆಯೋ? ಸತ್ತಿದೆಯೋ ಎಂದು ತರಾಟೆಗೆ ತೆಗೆದುಕೊಂಡರು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಆರೋಪಿಗಳು ಮತ್ತು ಉಗ್ರರಿಗೆ ಸಕಲ ಸವಲತ್ತು ಸಿಗುತ್ತಿದೆ. ಭಯೋತ್ಪಾದಕರನ್ನು ಓಲೈಕೆ ಮಾಡುತ್ತಿರುವ ಪರಿಣಾಮ ಇದು. ಕಾಂಗ್ರೆಸ್ ಈಗ ಜಾತ್ಯತೀತ ಪಕ್ಷವಾಗಿ ಉಳಿದಿಲ್ಲ. ಅದು ಕೋಮುವಾದಿ ಪಕ್ಷ ಎಂದು ವಾಗ್ದಾಳಿ ನಡೆಸಿದರು.

ಪ್ರತಿಯೊಂದು ವಿಷಯಕ್ಕೂ ನನಗೆ ಗೊತ್ತಿಲ್ಲ, ಮಾಹಿತಿ ತರಿಸಿಕೊಳ್ಳುತ್ತೇನೆ, ಸಭೆ ಬಳಿಕ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುತ್ತೇನೆ, ನಾನು ದೇಶದಲ್ಲೆ ಅತ್ಯಂತ ಸಕ್ರಿಯ ಸಚಿವ ಎಂದು ಹೇಳಿಕೊಳ್ಳುವ ಪರಮೇಶ್ವರ್ ಅವರ ಗಮನಕ್ಕೆ ಇದು ಬಂದಿಲ್ಲ ಎಂದರೆ ಹೇಗೆ ಎರಡೂವರೆ ವರ್ಷ ನೀವು ಏನು ಮಾಡುತ್ತಿದ್ದೀರಿ ಎಂದು ಆಕ್ರೋಶ ಹೊರಹಾಕಿದರು. ಬಾಂಬ್ ಹಾಕುವವರಿಗೆ, ದೇಶ ವಿಭಜನ ಮಾಡುವವರಿಗೆ, ಪಾಕಿಸ್ತಾನದವರಿಗೆ ರಾಜಾತಿಥ್ಯ ಸಿಗುತ್ತಿದೆ. ಕುಕ್ಕರ್ ಬಾಂಬ್ ಹಾಕಿದವನು ಬ್ರದರ್, ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಕೂಗಿದವರಿಗೆ ಬಿರಿಯಾನಿ ಸಿಗುತ್ತದೆ ಎಂದು ಕುಹುಕವಾಡಿದರು.

ಐದು ಕೋಟಿ ವೆಚ್ಚದಲ್ಲಿ ಜೈಲಿನಲ್ಲಿ ನೂರಾರು ಸಿಸಿಟಿವಿ ಅಳವಡಿಸಲಾಗಿದೆ. ಅಷ್ಟೂ ಹೇಗೆ ಒಂದೇ ಸಲ ಆಫ್ ಆಗುತ್ತವೆ ಗುಪ್ತಚರ ಇಲಾಖೆ ನೆಲಕಚ್ಚಿದೆ. ಅದರ ಅಧಿಕಾರಿಗಳು ಕಾಂಗ್ರೆಸ್ ಗುಲಾಮಗಿರಿಯಲ್ಲಿದ್ದಾರೆ ಎಂದು ಕಿಡಿಕಾರಿದರು. ಜೈಲಿನೊಳಗೆ ಮೊಬೈಲ್, ಗಾಂಜಾ, ಮಾಂಸ ಹೋದರೂ ಗೊತ್ತಾಗುವುದಿಲ್ಲ. ಜೈಲಿನ ವಿಡಿಯೋಗಳು ವೈರಲ್ ಆಗಿವೆ. ಪಾರ್ಟಿ ಮಾಡುತ್ತಿರುವ ಫೋಟೋಗಳು ಬಯಲಾಗಿವೆ. ಜೈಲಿನೊಳಗಿಂದಲೇ ಫೋನ್ (2ನೇಪುಟಕ್ಕೆ)

## ಹಜರತ್ ಟಿಪ್ಪು ಸುಲ್ತಾನ್ ರವರ 275 ನೇ ಜಯಂತಿ ಆಚರಣೆ

ಯುವ ಮಾರ್ಗ ಸುದ್ದಿ



**ಮಾನ್ವಿ,ನ.10–** ಪಟ್ಟಣದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಟಿಪ್ಪು ಸುಲ್ತಾನ್ ಸಂಘದ ತಾಲೂಕು ಘಟಕದ ವತಿಯಿಂದ ನಡೆದ ಮೈಸೂರು ಹುಲಿ ಹಜರತ್ ಟಿಪ್ಪು ಸುಲ್ತಾನ್‌ರವರ 275 ನೇ ಜಯಂತಿ ಕಾರ್ಯಕ್ರಮದಲ್ಲಿ ಹಜರತ್ ಟಿಪ್ಪು ಸುಲ್ತಾನ್‌ರವರ ಭಾವಚಿತ್ರಕ್ಕೆ ಜೆಡಿಎಸ್ ಪಕ್ಷದ ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ ಪುಷ್ಪ ಹಾಕುವ ಮೂಲಕ ಜಯಂತಿಯನ್ನು ಆಚರಿಸಿ ಮಾತನಾಡಿ ಮೈಸೂರು ಹುಲಿ ಹಜರತ್ ಟಿಪ್ಪು ಸುಲ್ತಾನ್‌ರವರು ಬ್ರಿಟಿಷರ ವಿರುದ್ಧ ನಿರಂತರವಾಗಿ ಹೋರಾಟ ಮಾಡುವ ಮೂಲಕ ದೇಶಪ್ರೇಮವನ್ನು ಮೆರೆದಿದ್ದಾರೆ ಎಂದು ತಿಳಿಸಿದರು.

ಟಿಪ್ಪು ಸುಲ್ತಾನ ಸಂಘದ ರಾಜ್ಯ ಸಂಚಾಲಕರಾದ ಸೈಯಾದ್ ಹುಸೇನ್ ಸಾಬ್, ಸತ್ತರ್ ಬಂಗ್ಲೆವಾಲ ,ಮೌನೇಶ್. ಹೆಚ್.ಪುರಸಭೆ ಸದಸ್ಯರಾದ ಹುಸೇನ್ ಬಾಷ, ಬಾಷಸಾಬ್, ಜೀಲಾನಿ ಖುರೇಶಿ,ಎ.ಕೆ.ಜಾಗೀರದಾರ್ ಸಾಹೇಬ್, ಮೌಲಾಸಾಬ್,ಶೇಖ ಬಾಬಾ,ನಾಸೀರ್ ಅಲಿ.ಖಾಲೀಲ್ ಕುರೇಶಿ,ವೀರೇಶ ಯಾದವ್,ಪಿ.ರವಿಕುಮಾರ,ದೇವರಾಜ, ಟಿಪ್ಪು ಸುಲ್ತಾನ ಸಂಘದ ತಾ.ಅಧ್ಯಕ್ಷರಾದ ಮಹೇಬೂಬ್ ಖುರೇಶಿ, ತಾ. ಕಾರ್ಯಧ್ಯಕ್ಷರಾದ.ಎಂ.ಡಿ, ಫಯಾಜ್, ನಗರ ಘಟಕದ ಅಧ್ಯಕ್ಷರಾದ ಯೂಸೂಫ್ ಖುರೇಶಿ, ತಾ.ಉಪಾಧ್ಯಕ್ಷರಾದ ಸುಭಾನಿ, ತಾ.ಕಾರ್ಯದರ್ಶಿ ಕೆ.ಸೈಯಾದ್ ಶಾಜೀದ್ ಪಾಷಾ,ಬಸವರಾಜಸ್ವಾಮಿ,ದೇವರಾಜ.ಜೆ.ಹೆಚ್ ,ಸುಭಾನ್ ಬೇಗ್,ಅಬ್ರಹಾರ್ ಕುರೇಶಿ,ಇದ್ದರು.

ಮೈಸೂರು ಹುಲಿ ಹಜರತ್ ಟಿಪ್ಪು ಸುಲ್ತಾನ್‌ರವರ ಜಯಂತಿ ಅಂಗವಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಾಲು.ಹಣ್ಣು ವಿತರಿಸಲಾಯಿತು.

## ಗೋವಿಂದ ನಾಯಕರ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡುವುದು ನಿಲ್ಲಿಸಿ : ವಿಶ್ವಕಾಂತ್ರಿ ಗೆಜ್ಜಲಗಟ್ಟಾ

ಯುವ ಮಾರ್ಗ ಸುದ್ದಿ




**ಲಿಂಗಸುಗೂರು,ನ.10–** ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿಯೇ ಸೇವೆ ಸಲ್ಲಿಸುತ್ತಿರುವ ಗೋವಿಂದ ನಾಯಕ ತಾಲೂಕಿನ ಜನತೆಗೆ ಚಿರಪರಿ ಚಿತರಾಗಿದ್ದಾರೆ. ಅವರ ವರ್ಚಸ್ಸು ಕಂಡು 2008ರಲ್ಲಿ ಮಾನಪ್ಪ ವಜ್ಜಲ್‌ರು ಬಿಜೆಪಿ ಪಕ್ಷಕ್ಕೆ ಕರೆತಂದಿದ್ದರು ಗೋವಿಂದ ನಾಯಕರ ಶ್ರಮದಿಂದ 2008, 2013ರಲ್ಲಿ ವಜ್ಜಲ್‌ರು ಶಾಸಕರಾದರು, ವಜ್ಜಲ್‌ರಿಗೆ ಗೋವಿಂದ ನಾಯಕ ಅನಿವಾರ್ಯವಾಗಿತ್ತೇ ಹೊರತು, ನಾಯಕರಿಗೆ ಅಲ್ಲ ಎಂದು ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ವಿಶ್ವಕ್ರಾಂತಿ ಗೆಜ್ಜಲಗಟ್ಟಾ ತಿರುಗೇಟು ನೀಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಿಜೆಪಿ ಮುಖಂಡರು ಗೋವಿಂದ ನಾಯಕರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಮೊದಲು ನಿಲ್ಲಿಸಬೇಕು. ಇಲ್ಲದಿದ್ದರೆ ಪರಿಣಾಮ ಸರಿಯಾಗಿರಲ್ಲ. ಸರಕಾರದಿಂದ ಬಂದ ಅನುದಾನವನ್ನು ಜನರಿಗೆ ತಲುಪಿಸುವ ಕೆಲಸ ಮಾಡಿ. ಕೇವಲ ಆರೋಪಗಳನ್ನು ಮಾಡುತ್ತಾ ಬಿಜೆಪಿಗರು ಕಾಲಹರಣ ಮಾಡಬೇಡಿ. ಕಾಂಗ್ರೆಸ್ ಮುಖಂಡರು ಯಾವತ್ತೂ ಜನಪರವಾಗಿ ಅಭಿವೃದ್ಧಿಗೆ ಶ್ರಮಿಸುವ ಕೆಲಸ ಮಾಡುತ್ತಾರೆಯೇ ವಿನಃ ನಿಮ್ಮಂತೆ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುವುದಿಲ್ಲ ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೀವನ್ ಬಾಳೇಗೌಡ, ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಸೈಯದ್ ಖಾಜಾಹುಸೇನ್ ಪೂಲವಾಲೆ, ಪ.ಪಂ. ವಿಭಾಗದ ಅಧ್ಯಕ್ಷ ಸಂಗಮೇಶ ನಾಯಕ, ಪ.ಜಾ. ವಿಭಾಗದ ಪ್ರಧಾನ ಕಾರ್ಯದರ್ಶಿ ವೆಂಕಟೇಶ ರಾಠೋಡ್, ಮುಖಂಡರಾದ ಶರಣಪ್ಪ ಕಟಗಿ, ಪಂಪಾಪತಿ ಪರಂಗಿ ಸೇರಿದಂತೆ ಇದ್ದರು.

## ರಾಜಾ ವೆಂಕಟಪ್ಪ ನಾಯಕ ಜೆಡಿಎಸ್ ಕೋರ್ ಕಮಿಟಿ ಸದಸ್ಯರಾಗಿ ಆಯ್ಕೆ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.10–** ಪಕ್ಷ ಸಂಘಟನೆ ಮತ್ತು ಬಲವರ್ಧನೆಗಾಗಿ ಜೆಡಿಎಸ್ ಕೋರ್ ಕಮಿಟಿ ಪುನರ್ ರಚನೆಗೊಂಡಿದ್ದು, ಇಂದು ಬೆಂಗಳೂರಿನ ಜೆ.ಪಿ. ಭವನದಲ್ಲಿ ನಡೆದ ವಿಶೇಷ ಸಭೆಯಲ್ಲಿ ಮಾಜಿ ಉಪಸಭಾಧ್ಯಕ್ಷ ಶ್ರೀ ಎಂ. ಕೃಷ್ಣಾರೆಡ್ಡಿ ಅವರನ್ನು ನೂತನ ಕೋರ್ ಕಮಿಟಿ ಅಧ್ಯಕ್ಷರಾಗಿ ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ದೊರೆ ಅವರನ್ನು ಕೋರ್ ಕಮಿಟಿಯ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ. ಪಕ್ಷದ ಪರವಾಗಿ ಅವರು ನೀಡಿದ ಸೇವೆ, ಸಂಘಟನೆ ಬಲವರ್ಧನೆಗೆ ಮಾಡಿದ ಶ್ರಮ ಮತ್ತು ತಳಮಟ್ಟದ ಹೋರಾಟವನ್ನು ಪರಿಗಣಿಸಿ ಈ ಗೌರವ ದೊರೆತಿದೆ.

ಸದಸ್ಯರಾಗಿ ಆಯ್ಕೆಯಾದ ಸಂತೋಷವನ್ನು ವ್ಯಕ್ತಪಡಿಸಿದ ರಾಜಾ ವೆಂಕಟಪ್ಪ ನಾಯಕ ದೊರೆ ಅವರು,

"ಪಕ್ಷದ ಹಿರಿಯ ನಾಯಕರು ಹಾಗೂ ನಾಯಕತ್ವ ನನ್ನ ಮೇಲೆ ತೋರಿದ ವಿಶ್ವಾಸಕ್ಕೆ ಹೃತ್ಪೂರ್ವಕ ಧನ್ಯವಾದಗಳು. ಪಕ್ಷದ ಬಲವರ್ಧನೆಗಾಗಿ ಶ್ರದ್ಧೆ, ನಿಷ್ಠೆ ಮತ್ತು ಸಮರ್ಪಣೆಯೊಂದಿಗೆ ಕೆಲಸ ಮಾಡುವೆ" ಎಂದು ಹೇಳಿದರು.

## ಸಾರ್ವಜನಿಕ ಪ್ರದೇಶದಲ್ಲಿ ಸ್ವಚ್ಚತೆ ಕಾಪಾಡಿ ಪರಿಸರ ಉಳಿಸಿ: ಛತ್ರಪ್ಪ



ಯುವ ಮಾರ್ಗ ಸುದ್ದಿ

**ಸಿಂಧನೂರು,ನ.10–**ಸಾರ್ವಜನಿಕ ಪ್ರದೇಶಗಳು ನಮ್ಮದೇ ಅಸ್ತಿಗಳಾಗಿದ್ದು ಅವುಗಳನ್ನು ಸ್ವಚ್ಚತೆಯಿಂದ ಕಾಪಾ ಡಿಕೊಂಡು ಹೋಗುವುದು ಪ್ರತಿಯೊಬ್ಬರ ಕರ್ತವ್ಯ ಎಂದು 13ನೇ ವಾರ್ಡ್ ನಗರಸಭೆ ಸದಸ್ಯ ಛತ್ರಪ್ಪ ಅವರು ಹೇಳಿದರು.

ನಗರದ ನಗರಸಭೆ ಸಮು ದಾಯ ಸಂಚಾ ಲಕರು ಹಾಗೂ ವನಸಿರಿ ಫೌಂಡೇಶನ್ (ರಿ)ರಾಯಚೂರು ವತಿಯಿಂದ ಸಿಂಧನೂರಿನ ಇಲಾಹಿ ಸರ್ಕಲ್ ಟಿಪ್ಪು ಸುಲ್ತಾನ ರಸ್ತೆ ಇಂದಿರಾ ನಗರ (ಬಪ್ಪುರ ರೋಡ್) ವಾರ್ಡ್ ನಂ 12 ಮತ್ತು 13 ವಾರ್ಡ್ ನಲ್ಲಿ ಕಸ ಹಾಕಿದ ಜಾಗದಲ್ಲಿ ಸ್ವಚ್ಚಗೊಳಿಸಿ, ರಂಗೋಲಿ ಹಾಕಿ,ಅದೇ ಸ್ಥಳದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊ ಳ್ಳಲಾಯಿತು. ಕಾರ್ಯಕ್ರ ಮವನ್ನು ಸಸಿ ನೆಟ್ಟು ನಿರು ಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವ ರು ಸಾರ್ವಜನಿಕರು ವಾರದಲ್ಲಿ ಒಂದು ದಿನವನ್ನು ಸ್ವಚ್ಚತೆಗೆ ಆದ್ಯತೆ ನೀಡಬೇಕು.ಪ್ರತಿ ವಾರವು ಒಂದೊಂದು ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಸ್ವಚ್ಚತೆ ಮಾಡಿ ಸಸಿ ನೆಟ್ಟು ಪರಿಸರ ಜಾಗೃತಿ ಮೂಡಿಸುವ ವನಸಿರಿ ಫೌಂಡೇಷನ್ ಕಾರ್ಯದ ಜೊತೆಗೆ ನಗರದ ವಿವಿಧ ಸಂಘ ಸಂಸ್ಥೆಗಳು ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ವನಸಿರಿ ಅಮರೇಗೌಡ ಮಲ್ಲಾಪುರ ಕರ್ನಾಟಕ ಸರಕಾರ ರಾಜ್ಯ ಪ್ರಶಸ್ತಿ ಪುರಸ್ಕೃತರು, 12 ವಾರ್ಡ್ ನಗರ ಸಭೆ ಸದಸ್ಯ ರಾದ ಇಲಿಯಷ್, ಉಮೇಶ ಗೌಡ ಹರಳಹಳ್ಳಿ, ಆದೇ ಶ ಶಿಕ್ಷಕರು, ಹುಸೇನ್ ಬಾಷಾ , ಮಲ್ಲಿಕಾರ್ಜು ನ್ ಕುನ್ನಟಗಿ,ಮುದುಕಪ್ಪ ಹೊಸಳ್ಳಿ ಕ್ಯಾಂಪ್, ರಘು ಸಿಂಧನೂರು, ನಗರಸಭೆ ಸಮುದಾಯ ಸಂಚಾಲಕರಾದ ಅಕ್ಷತಾ ಹಿರೇಮಠ, ಗೌರಮ್ಮ,ಬಸಮ್ಮ ಹಿರೇಮಠ, ಶಕುಂತಲಾ ಹಾಗೂ ನಗರಸಭೆ,ಮತ್ತು ವನಸಿರಿ ಪೌಂಡ ೇಷನ್ ಸದಸ್ಯರು ಅನೇಕರು ಇದ್ದರು.

# ಜನರನ್ನು ಸರ್ಕಾರಿ ಕೆಲಸಗಳಿಗಾಗಿ ಅನಗತ್ಯವಾಗಿ ಅಲೆದಾಡಿಸುವುದನ್ನು ನಾನು ಸಹಿಸುವುದಿಲ್ಲ :ಸಿಎಂ

ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿದ ಮುಖ್ಯಮಂತ್ರಿಯವರು, ಐತಿಹಾಸಿಕ ದಸರಾ ಹಬ್ಬವನ್ನು ಅತ್ಯಂತ ಯಶಸ್ವಿಯಾಗಿಸಿದ್ದಕ್ಕೆ ಜಿಲ್ಲಾಡಳಿತದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅಭಿನಂದಿಸಿದರು. ಮೈಸೂರು ಅಭಿವೃದ್ಧಿಯ ವೇಗ ಹೆಚ್ಚಾಗಬೇಕು. ನಿಗದಿತ ಅವಧಿಯ ಒಳಗೆ ಕೆಲಸಗಳು ಪೂರ್ಣಗೊಳ್ಳಬೇಕು ಎಂದು ಹಿಂದಿನ ಸಭೆಯಲ್ಲಿ ತಾವು ಸೂಚನೆ ನೀಡಿದ್ದು, ಅದು ಜಾರಿಯಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯ ಅಭಿವೃದ್ಧಿ ಜೊತೆಗೆ ಮೈಸೂರು ಜನತೆಯ ಸಮಸ್ಯೆಗಳನ್ನು ಆಲಿಸುವ ಮತ್ತು ಪರಿಹಾರ ಒದಗಿಸುವ ಕೆಲಸವಾಗಬೇಕು. ಮೈಸೂರಿನ ಜನ, ನನ್ನನ್ನು ಹುಡುಕಿಕೊಂಡು ಬೆಂಗಳೂರಿಗೆ ತುಂಬಾ ಮಂದಿ ಬರುತ್ತಿದ್ದಾರೆ. ನಾನು ಬೆಂಗಳೂರಿನಲ್ಲಿ ಇಲ್ಲದಿದ್ದರೆ ರಾತ್ರಿವರೆಗೂ ನನಗಾಗಿ ಕಾಯುತ್ತಾ ಇರುತ್ತಾರೆ. ಇವರಲ್ಲಿ ವೈಯಕ್ತಿಕ ಸಮಸ್ಯೆಗಾಗಿ ಬರುವವರು ಕಡಿಮೆ. ಕಂದಾಯ ಇಲಾಖೆಗಳ ಸಮಸ್ಯೆಗಳಿಗಾಗಿ ಬರುವವರೇ ಹೆಚ್ಚು. ಮೈಸೂರಿನಲ್ಲೇ ಅವರ ಕೆಲಸಗಳು ಆಗಿದ್ದರೆ, ಮೈಸೂರಿನ ಕಚೇರಿಗಳಲ್ಲೇ ಕುಳಿತು ಅಧಿಕಾರಿಗಳು ಜನರ ಅಹವಾಲು ಕೇಳಿದ್ದರೆ, ಕೇಳಿ ಬಗೆಹರಿಸಿದ್ದರೆ ಅವರು ಮೈಸೂರಿನಿಂದ ಬೆಂಗಳೂರಿನವರೆಗೂ ಹುಡುಕಿಕೊಂಡು ಬರುತ್ತಿರಲಿಲ್ಲ. ಜನರನ್ನು ಅಲೆದಾಡಿಸುವುದು ಅಕ್ಷಮ್ಯ. ಇದನ್ನು ನಾನು ಸಹಿಸಲ್ಲ ಎಂದು ಎಚ್ಚರಿಸಿದರು.

ಸಿಇಒ ಮತ್ತು ಇತರ ಅಧಿಕಾರಿಗಳು ಆಸ್ಪತ್ರೆ, ಶಾಲೆ, ಹಾಸ್ಟೆಲ್‌ಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ನಾನು ಕೊಟ್ಟ ಸೂಚನೆ ಪಾಲನೆ ಆಗುತ್ತಿಲ್ಲ. ಇನ್ಸ್‌ಪೆಕ್ಟರ್‌ಗಳು, ಪಿಡಿಒಗಳು, ವಿಎಗಳ ಮೇಲೆ ಈ ಬಗ್ಗೆ ಸಿಕ್ಕಾಪಟ್ಟೆ ದೂರುಗಳು ಬರುತ್ತಿವೆ. ಜಿಲ್ಲಾಧಿಕಾರಿಗಳು ತಹಶೀಲ್ದಾರ್ ಕಚೇರಿಗಳಿಗೆ ಗೌಪ್ಯ ಭೇಟಿ ನೀಡಿದರೆ ಕೆಲಸ ಕದಿಯುವ ಅಧಿಕಾರಿಗಳು ಮತ್ತು ಸಿಬ್ಬಂದಿ ಸಿಕ್ಕಿ ಬೀಳುತ್ತಾರೆ. ಇಲ್ಲಿಯವರೆಗೂ ಅಂತಹ ಅಧಿಕಾರಿಗಳ ವಿರುದ್ಧ ವರದಿ ಬಂದಿಲ್ಲ ಏಕೆ? ಎಂದು ಪ್ರಶ್ನಿಸಿದರು. ಹಾಸ್ಟೆಲ್‌ಗಳಲ್ಲಿ ಊಟದ ವ್ಯವಸ್ಥೆಯನ್ನು ಮೇಲಿಂದ ಮೇಲೆ ಪರಿಶೀಲನೆ ನಡೆಸಬೇಕು ಎನ್ನುವ ಸ್ಪಷ್ಟ ಸೂಚನೆ ನೀಡಿದರು.

# ರಾಜ್ಯದ ಜೈಲುಗಳು ಉಗ್ರರ ಪಾಲಿಗೆ ಸ್ವರ್ಗವಾಗುತ್ತಿವೆ : ಅಶೋಕ್ ಅಕ್ರೋಶ

ಮಾಡಿ ಉದ್ಯಮಿಗಳಿಗೆ ಬೆದರಿಸಿ ಹಣ ತರಿಸಿಕೊಳ್ಳುತ್ತಿದ್ದಾರೆ? ಇಲ್ಲದಿದ್ರೆ ಅಷ್ಟೊಂದು ಹಣ ಹೇಗೆ ಕೈದಿಗಳಿಗೆ ಬರುತ್ತದೆ ಎಂದು ಪ್ರಶ್ನಿಸಿದರು.

ಜೈಲಿನಲ್ಲಿ ಈ ಸವಲತ್ತು ಸುಲಭಕ್ಕೆ ಸಿಗುವುದಿಲ್ಲ. ಸಾಕಷ್ಟು ಹಣಬೇಕು. ಆ ಹಣ ಕೈದಿಗಳಿಗೆ ಎಲ್ಲಿಂದ ಬರುತ್ತದೆ? ಜೈಲು ಸವಲತ್ತು ಉಚಿತ ಭಾಗ್ಯನಾ? ದರ್ಶನ್ ಒಂದು ಸಿಗರೇಟ್ ಸೇದಿದ್ದಕ್ಕೆ ಸರ್ಕಾರ ಸುಪ್ರಿ?ಂಕೋರ್ಟ್ ವರೆಗೆ ಹೋಗಿ ಬೇಲ್ ರದ್ದು ಮಾಡಿಸಿತು. ನಾನು ದರ್ಶನ್ ಬೆಂಬಲಿಸುತ್ತಿಲ್ಲ, ದರ್ಶನ್ ಸಿಗರೇಟು ಸೇದಿದ್ದು ತಪ್ಪೆ?. ಆದರೆ ದರ್ಶನ್ ವಿಚಾರದಲ್ಲಿ ಕೈಗೊಂಡ ನಿಲುವು, ಇವರಿಗ್ಯಾಕಿಲ್ಲ? ಈಗ ಏನ್ ಮಾಡುತ್ತಿ?ರಿ ಹೇಳಿ? ಎಂದು ಪ್ರಶ್ನೆ ಮಾಡಿದರು.

ಈ ಸರ್ಕಾರ ಸತ್ತಿದೆ, ಸರ್ಕಾರ ನೆಗೆದು ಬಿದ್ದಿದೆ. ಈ ಹಣ ಹೊರಲು ಸಿಎಂ, ಡಿಸಿಎಂ ಪೈಪೋಟಿಗಿಳಿದಿದ್ದಾರೆ ಎಂದು ಆಕ್ರೊ?ಶ ಹೊರಹಾಕಿದರು. ವಿಮಾನ ನಿಲ್ದಾಣದಲ್ಲಿ ನಮಾಜ್ ನಡೆಸಿರುವ ಪ್ರಕರಣಕ್ಕೆ ಪ್ರತಿಕ್ರಿಯಿಸಿದ ಅವರು, ಈ ಸರ್ಕಾರಕ್ಕೆ ಹೇಳೋರು ಕೇಳೋರು ಯಾರೂ ಇಲ್ಲ? ಮುಸ್ಲಿಮರ ಓಲೈಕೆ ಮಿತಿ ಮೀರಿದೆ ಎಂದು ಅಸಮಾಧಾ ವ್ಯಕ್ತಪಡಿಸಿದರು.

# ಪಾದಯಾತ್ರೆ :ಹಿಪ್ಪರಗಿಯಿಂದ ಗುಜರಾತ್ ಕಡೆಗೆ



**ಕಲಬುರಗಿ,ನ. 10–** ಇಲ್ಲಿಯವರೆಗೂ ಸುಮಾರು 12 ಸಾವಿರ ಕಿ.ಮೀ 360 ದಿನಗಳ ಕಾಲ ಪಾದಯಾತ್ರೆ ಮಾಡಿದ ಪಾದಯಾತ್ರೆಗೌಡರೆಂದೇ ಚಿರಪರಿಚಿತ ಕಲಬುರಗಿ ಜಿಲ್ಲೆಯ ಜೇವರಗಿ ತಾಲೂಕಿನ ಹಿಪ್ಪರಗಾ ಎಸ್.ಎನ್. ಗ್ರಾಮದ ಶ್ರೀ ಗೌರಿ ಶಂಕರ ದೇವಸ್ಥಾನದ ಅಧ್ಯಕ್ಷ ಮಡಿವಾಳಪ್ಪಗೌಡ ಮಾಲಿಪಾಟೀಲ ಅವರು ತಮ್ಮ ತಂಡದೊಂದಿಗೆ ಮುಂಬರುವ ಜನವರಿ ತಿಂಗಳಲ್ಲಿ ಪಾದಯಾತ್ರೆಗೆ ತೆರಳಲು ಸಜ್ಜಾಗುತ್ತಲಿದ್ದಾರೆ.50 ದಿನಗಳ 1800 ಕಿ.ಮೀ ದೂರದ ಪಾದಯಾತ್ರೆಗೆ ಸಿದ್ಧತೆ ನಡೆದಿದೆ

ಈ ತಂಡ ಮಂದೇವಾಲ ಹಿಪ್ಪರಗಿ ಗ್ರಾಮದಿಂದ ಅಕ್ಕಲಕೋಟೆ, ಸೊಲ್ಲಾಪೂರ, ಭೀಮಾಶಂಕರ ಜ್ಯೋತಿರ್ಲಿಂಗ, ನಾಶಿಕ, ತ್ರಯಂಬಕೇಶ್ವರ ಜೋತಿರ್ಲಿಂಗ ಗುಜರಾತ ರಾಜ್ಯದ ಸೂರತ್ , ವಡೋದರ, ಭಾವನಗರ, ಸೌರಾಷ್ಟ್ರ ಸೋಮನಾಥೇಶ್ವರ ಜ್ಯೋತಿರ್ಲಿಂಗ, ಪೋರಬಂದರ್ ,ದ್ವಾರಕ, ರುಕ್ಮಿಣಿ ದೇವಿ ಮಂದಿರ, ನಾಗೇಶ್ವರ ಜ್ಯೋತಿರ್ಲಿಂಗ ಹೀಗೆ ಮಹಾರಾಷ್ಟ್ರ ಹಾಗೂ ಗುಜರಾತ ರಾಜ್ಯದ ಜ್ಯೋತಿರ್ಲಿಂಗಗಳ ಕ್ಷೇತ್ರ ದರ್ಶನಕ್ಕೆ ಪಾದಯಾತ್ರೆ ಮೂಲಕ ತೆರಳಲು ಸಜ್ಜಾಗುತ್ತಲಿದ್ದಾರೆ. ಇದರೊಂದಿಗೆ ಇವರು ಹನ್ನೆರಡು ಜ್ಯೋತಿರ್ಲಿಂಗಗಳು ಪಾದಯಾತ್ರೆ ಮೂಲಕವೇ ದರ್ಶನ ಪಡೆದಂತಾಗುವದು.ಇವರು ಕಾಶಿಗೆ ಪಾದಯಾತ್ರೆ ಮೂಲಕ ಮೂರು ಬಾರಿ ತೆರಳಿದ್ದರು. ಬಹುಶಃ ಅವರು ವಾಹನದಲ್ಲಿ ತೆರಳಿ ಪುಣ್ಯ ಕ್ಷೇತ್ರ ದರ್ಶನ ಪಡೆದಿದ್ದಕ್ಕಿಂತ ಹೆಚ್ಚು ಪಾದಯಾತ್ರೆ ಮೂಲಕವೇ ದೇವರ ದರ್ಶನ ಮಾಡಿದ್ದೇ ಹೆಚ್ಚು ಎಂದು ಗುರುರಾಜ.ಕೆ.ಪಟ್ಟಣಶೆಟ್ಟಿ ಅವರು ತಿಳಿಸಿದ್ದಾರೆ.

# ಮಕ್ಕಳಲ್ಲಿ ಕನ್ನಡ ಪರಂಪರೆ ಬೆಳೆಸಬೇಕು : ವೀಣಾ ಜೋಶಿ



**ಬೀದರ್, ನ.10–** ಮಕ್ಕಳಲ್ಲಿ ಕನ್ನಡ ಭಾಷೆಯ ಇತಿಹಾಸ ಹಾಗೂ ಪರಂಪರೆ ತಿಳಿಸುವಂತಾಗಬೇಕೆಂದು ಲಾಡಗೇರಿಯ ನಮ್ಮೂರ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ವೀಣಾ ಜೋಶಿ ಹೇಳಿದರು.

ಅವರು ಇತ್ತೀಚಿಗೆ ನಡೆದ ಬೀದರ ಲಾಡಗೇರಿ ಬಡಾವಣೆಯ ನಮ್ಮೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ನಿಮಿತ್ಯವಾಗಿ ಚಂದ್ರಶೇಖರ ಅಜಾದ್ ಯುವಕ ಸಂಘ ಏರ್ಪಡಿಸಿರುವ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕನ್ನಡಾಂಬೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಅವರು ಕನ್ನಡ ನಮ್ಮ ಆತ್ಮದ ನುಡಿ, ಅದರ ಗೌರವ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಹೊಸ ಪೀಳಿಗೆಗೆ ಕನ್ನಡದ ಶ್ರೀಮಂತ ಪರಂಪರೆ, ಸಾಹಿತ್ಯ ಮತ್ತು ಹೋರಾಟದ ಇತಿಹಾಸ ಪರಿಚಯಿಸುವ ಕಾರ್ಯ ಶಾಲಾ ಮಟ್ಟದಲ್ಲಿಯೇ ಪ್ರಾರಂಭವಾ ಗಬೇಕು ಎಂದರು. ಕನ್ನಡ ಭಾಷೆ ಉಳಿಯಬೇಕಾದರೆ ಕನ್ನಡ ಮಾತನಾಡುವ ಮನಸ್ಸು ಬೆಳೆಸಬೇಕಾಗಿದೆ ಎಂದು ಅವರು ಒತ್ತಾಯಿಸಿದರು.

ಶಾಲೆಯ ಮುಖ್ಯಗುರುರಾದ ಚಂದ್ರಕಾಂತ ಅವರು ಮಾತನಾಡಿ, ಕನ್ನಡ ಭಾಷೆಯ ಸಂಸ್ಕೃತಿ, ಪರಂಪರೆ ಮತ್ತು ಸಾಹಿತ್ಯ ನಮ್ಮ ಅಸ್ತಿತ್ವದ ಅಡಿಪಾಯವಾಗಿದ್ದು, ವಿದ್ಯಾರ್ಥಿಗಳು ದಿನನಿತ್ಯದಲ್ಲಿ ಕನ್ನಡದ ಬಳಕೆಯನ್ನು ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಕುಮಾರ ಶೆಟ್ಟಿ ಬಣ) ಜಿಲ್ಲಾ ಅಧ್ಯಕ್ಷರಾದ ಪೀಟರ ಚಿಟ್ಟಗುಪ್ಪ, ಪ್ರಮುಖರಾದ ರಮೇಶ್ ಜಮಾದಾರ್, ಚಂದ್ರಶೇಖರ ಅಜಾದ್ ಯುವಕ ಸಂಘದ ಅಧ್ಯಕ್ಷ ವಿಜಯಕುಮಾರ ಭಂಡೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶೇಶಿಕಾಂತ ಬಿರಾದಾರ, ಮಹೇಂದ್ರಕುಮಾರ, ಶಂಕರ ಮಂಡ್ರಪ್ಪನೋರ್, ಸತೀಶ್ ರೆಡ್ಡಿ, ಯೋಹಾನ ಹಲಗೆ, ಶ್ರೀನಿವಾಸ್ ಇಮಾಂದಾರ್, ರಮೇಶ ಬಿರಾದಾರ್, ಮಹಾರುದ್ರಪ್ಪಾ ಚಿಕ್ಲೆ, ಆಶಾ ಕಾರ್ಯಕರ್ತರು ವೇದಿಕೆ ಮೇಲಿದ್ದರು. ಅದೇ ಸಂದರ್ಭದಲ್ಲಿ ಯುವಕರು, ಶಾಲೆಯ ಶಿಕ್ಷಕರು, ಮಕ್ಕಳು ಸೇರಿ ಇತರರು ಉಪಸ್ಥಿತರಿದ್ದರು.

# ಶೈಕ್ಷಣಿಕ ವರ್ಷ ಪ್ರಾರಂಭವಾಗಿ 5 ತಿಂಗಳು ಕಳೆದರು ಮಕ್ಕಳಿಗೆ ಇಲ್ಲ ಶೂ ಭಾಗ್ಯ



**ಯುವ ಮಾರ್ಗ ಸುದ್ದಿ**

**ಮಾನ್ವಿ.ನ.10–** ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ 1ರಿಂದ 10ನೇ ತರಗತಿ ಯವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿವರ್ಷದಂತೆ ಸರ್ಕಾರದಿಂದ ಶಿಕ್ಷಣ ಇಲಾಖೆಯ ಮೂಲಕ ಶೂ ಹಾಗೂ ಸಾಕ್ಸ್ ಗಳನ್ನು ಶೈಕ್ಷಣಿಕ ವರ್ಷ ಪ್ರಾರಂಭವಾಗಿ 5 ತಿಂಗಳು ಕಳೆದರು ಕೂಡ ವಿತರಿಸದೆ ಇರುವುದ ರಿಂದ ಮಕ್ಕಳಿಗೆ ಅನಾನುಕೂಲವಾಗುತ್ತಿದೆ ಎಂದು ನೀರಮಾನ್ವಿ ಗ್ರಾಮದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭಾಸ ಮಾಡುತ್ತಿರುವ ಪಾಲಕರು ಹಾಗೂ ಮಾಜಿ ಯೋಧರಾದ ಜಲ್ಲಿ ಆಂಜನೇಯ್ಯನಾಯಕ ಒತ್ತಾಯಿಸಿ ದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ತಹಸೀಲ್ದಾರ್ ರವರಿಗೆ ಗ್ರೇಡ್–2 ತಹಸೀ ಲ್ದಾರ್ ಅಬ್ದುಲ್ ವಾಹೀದ್ ರವರಿ ಗೆ ತಾಲೂಕಿನ' ಮನವಿ ಸಲ್ಲಿಸಿ ಮಾತನಾಡಿ ಕೂಡಲೆ ತಾಲೂಕಿನ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಶೂ ಹಾಗೂ ಸಾಕ್ಸ್ ಗಳನ್ನು ವಿತರಿಸುವಂತೆ ಒತ್ತಾಯಿಸಿದರು.

ನೀರಮಾನ್ವಿ ಗ್ರಾಮದ ಹನುಮಂತ ತಾಸಿ, ತಿಮ್ಮಣ್ಣ ಮಡಿವಾಳ, ನಾಗರಾಜ ದೊರೆ ,ವೀರನಗೌಡ, ಮಂಜು ,ಶಿವಾಜಿ, ಶರಣಬಸವ ಆಲ್ಕೋಡ್ ಇದ್ದರು

# ಇಟಲಿ ಸಮ್ಮೇಳನದಲ್ಲಿ ಸಿಯುಕೆ ಕುಲಸಚಿವ ಆರ್. ಆರ್. ಬಿರಾದಾರ ಪ್ರಬಂಧ ಮಂಡನೆ

**ಕಲಬುರಗಿ,ನ.10–** ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವ ಪ್ರೋ. ಆರ್. ಆರ್. ಬಿರಾದಾರ ಅವರು ಭಾರತದಲ್ಲಿ ತೈಲ ಅನ್ವೇಷಣೆಯಲ್ಲಿ ಸೂಕ್ಷ್ಮಜೀವಾವಶೇಷಗಳ ಆರ್ಥಿಕ ಪ್ರಯೋಜನಗಳು: ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧವನ್ನು ಮಂಡಿಸಿದ್ದಾರೆ. ಇಟಲಿಯ ಪಿಸಾ ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದಲ್ಲಿ ನವೆಂಬರ್ ರಿಂದ 5–7, ವರೆಗೆ ನಡೆದ 'ದಿ ಮೈಕ್ರೋಪೇಲಿಯಂಟಾಲಜಿಕಲ್ ಸೊಸೈಟಿಯ' ವಾರ್ಷಿಕ ಸಮ್ಮೇಳನದಲ್ಲಿ ಈ ಪ್ರಬಂಧ ಮಂಡಿಸಿದರು. ಇದರಲ್ಲಿ ನ್ಯಾನೋವಿಜ್ಞಾನವೂ ಸೇರಿದಂತೆ, ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ಹವಾಮಾನ ಅಧ್ಯಯನಗಳಲ್ಲಿ ಸೂಕ್ಷ್ಮಜೀವಾವಶೇಷಗಳ ಉಪಯೋಗ ಮತ್ತು ಆರ್ಥಿಕ ಪ್ರಯೋಜನಗಳ ಕುರಿತಾಗಿ ಪ್ರೊ. ಬಿರಾದಾರ ಅವರು ವಿಶ್ಲೇಷಿಸಿದರು. ಸೂಕ್ಷ್ಮಜೀವಾವಶೇಷಗಳ ವಿಶ್ಲೇಷಣೆಯ ಫಲಿತಾಂಶಗಳು ತೈಲ ಅನ್ವೇಷಣೆಗಾಗಿ ಒಣ (ಶುಷ್ಕ) ಕೊಳವೆಗಳನ್ನು ಕೊರೆಯುವ ಅಪಾಯವನ್ನು ಶೇ. 40ರಷ್ಟು ಕಡಿಮೆ ಮಾಡುತ್ತದೆ ಮತ್ತು ಇದರಿಂದ ಯೋಜನೆಯ ಒಟ್ಟಾರೆ ವೆಚ್ಚದ ಕನಿಷ್ಠ ನಾಲ್ಕನೇ ಒಂದು ಭಾಗದಷ್ಟು ತೈಲ ಅನ್ವೇಷಣೆಯ ಒಟ್ಟಾರೆ ವೆಚ್ಚವನ್ನು ಕಡಿಮೆ ಮಾಡುತ್ತದೆ ಎಂದು ಅಧ್ಯಯನದಲ್ಲಿ ಪ್ರತಿಪಾದಿಸಲಾಗಿದೆ ಭಾರತದ ಒಂದು ಸಾರ್ವಜನಿಕ ಉದ್ಯಮವಾದ ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಶದ ಹಣಕಾಸಿನ ಕುರಿತಾಗಿ



ಚರ್ಚಿಸುತ್ತಾ, ಪ್ರತಿ ಮಿಲಿಯನ್ ಮೆಟ್ರಿಕ್ ಟನ್ (ಎಂಎಂಟಿ) ತೈಲ ಅನ್ವೇಷಣೆ ಮತ್ತು ಉತ್ಪಾದನೆಗಾಗಿ ವಾರ್ಷಿಕ ಸರಾಸರಿ ವೆಚ್ಚ ಬಹಳ ವೇಗವಾಗಿ ಹೆಚ್ಚಿದೆ, ಆದರೆ ನಿವ್ವಳ ಆದಾಯದ ಏರಿಕೆ ಬಹಳಷ್ಟು ನಿಧಾನವಾಗಿದೆ. 2001 ರಿಂದ 2024ರ ಅವಧಿಯಲ್ಲಿ ಒಎನ್‌ಜಿಸಿಯ ವಾರ್ಷಿಕ ಒಟ್ಟು ತೈಲ ಅನ್ವೇಷಣೆ ಮತ್ತು ಉತ್ಪಾದನೆಯ ಪ್ರಮಾಣವು ಸತತವಾಗಿ ಕಡಿಮೆಯಾಗಿದೆ. ಮುಂಬರುವ ದಿನಮಾನಗಳಲ್ಲಿ ತೈಲ ಬಿಕ್ಕಟ್ಟನ್ನು ನಿಭಾಯಿಸಲು, ಸೂಕ್ಷ್ಮಜೀವಾವಶೇಷಗಳ ಶೇಖರಣೆಯಿರುವ ಪ್ರದೇಶಗಳನ್ನು ಗುರುತಿಸುವ ಅನ್ವೇಷಣಾ ಅಧ್ಯಯನಗಳನ್ನು ಪ್ರೋತ್ಸಾಹಿಸಬೇಕು ಮತ್ತು ತೈಲ ಅನ್ವೇಷಣೆ ಮತ್ತು ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲು ಖಾಸಗಿ ವಲಯವನ್ನು ಪ್ರೇರೇಪಿಸಬೇಕು ಎಂದು ಅಧ್ಯಯನವು ಸೂಚಿಸಿದೆ.

# ಮೌಢ್ಯತೆ ನಾಶಕ್ಕೆ ಕನಕದಾಸರ ವಿಚಾರಧಾರೆ ಮಾದರಿ:ಡಾ.ಸಂಜೀವಕುಮಾರ ಅತಿವಾಳೆ

**ಬೀದರ್ ನ 10–** ಕನಕದಾಸರುತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿದ್ದ ಮೌಢ್ಯತೆ, ಅಸಮಾನತೆ ಹಾಗೂ ಅನ್ಯಾಯದ ವಿರುದ್ಧಧ್ವನಿಸೆಳೆದು, ಸಮಾನತೆ, ಸಹಾನುಭೂತಿ ಹಾಗೂ ಭಕ್ತಿ ಮಾರ್ಗದ ಮಹತ್ವವನ್ನು ಸಾರಿದರುಎಂದುಕರ್ನಾಟಕಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಡಾ.ಸಂಜೀವಕುಮಾರ ಅತಿವಾಳೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದರು.

ಅವರು ಬೀದರ್ ನಗರದಜೇಸ್ಕಾಂ ವಿಭಾಗಿಯ ಕಚೇರಿ ಆವರಣದಲ್ಲಿ ಅಖಿಲ ಕರ್ನಾಟಕ ಕನಕ ವಿದ್ಯುತ್ ಬಳಗ ಬೆಂಗಳೂರು, ಹಾಗೂ ಜೆಸ್ಕಾಂ ಕೆ.ಪಿ.ಟಿ.ಸಿ.ಎಲ್ ನೌಕರರ, ಹಾಗೂ ಕನಕ ಜಯಂತಿಉತ್ಸವ ಸಮಿತಿ ಬೀದರ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಬಂಧು, ಕನಕದಾಸರ 538ನೇ ಜಯಂತೋತ್ಸವಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮಉಪನ್ಯಾಸ ಮಂಡಿಸಿದರು.

ಅವರುಕನಕದಾಸರು ಕೇವಲ ಭಕ್ತ ಕವಿ ಮಾತ್ರವಲ್ಲ, ಅವರು ಸಮಾಜ ಸುಧಾರಕರೂಆಗಿದ್ದರು.ತಮ್ಮ ಸಾಹಿತ್ಯದ ಮೂಲಕ ಅವರು ಎಲ್ಲರನ್ನು ಒಂದೇ ಮಾನವ ಬಾವನೆಯಅಡಿಯಲ್ಲಿ ಸೇರಿಸಲು ಪ್ರಯತ್ನಿಸಿದರು.ಮೌಢ್ಯತೆ, ಜಾತಿಭಾವನೆ, ಅಹಂಕಾರ ಇವೆಲ್ಲವು ನಾಶವಾಗಬೇಕಾದರೆ ಕನಕದಾಸರಂತಹ ಮಹನೀಯರ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಎಂದು ಡಾ.ಅತಿವಾಳೆ ತಮ್ಮಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯಅತಿಥಿಯಾಗಿ ಆಗಮಿಸಿ ಮಾತನಾಡಿದ ಬೀದರಕಛೇರಿ ವಿಭಾಗೀಯ ಲೆಕ್ಕಧಿಕಾರಿ ಮಲ್ಲಿಕಾರ್ಜುನ್ ಶಟಕಾರ ಅವರು ಅಜ್ಞಾನವೇ ಮೌಢ್ಯತೆಯ ಮೂಲ ಎಂದುಕನಕದಾಸರು ನಂಬಿದರು. ಅವರು ಶಿಕ್ಷಣ ಮತ್ತುಜ್ಞಾನದಿಂದ ಮಾತ್ರ ಸಮಾಜ ಸುಧಾರಣೆ ಸಾಧ್ಯಎಂದರು.



ಉಚ್ಚಾ ಬೀರಲಿಂಗೇಶ್ವರಆಶ್ರಮ ಭಾಲ್ಕಿಯ ಪೂಜ್ಯ ಶ್ರೀ ಬಾಲ ತಪಸ್ವಿ ಗೋಪಾಲ್ ಮುತ್ಯಾಅವರುಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.ವಿ.ಪ್ರ.ನಿ.ನಿ.ನೌ. ಸಂಘದಜೆಸ್ಕಾಂಕಲ್ಬುರ್ಗಿ ಉಪ ಕಾರ್ಯದರ್ಶಿಗಳಾದ ವೀರಣ್ಣಾ ಮುದ್ನಾಳೆ ಮಾತನಾಡಿದರು.

ಬೀದರ್ ಜೆಸ್ಕಾಂಕಛೇರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರಾದ ರಮೇಶ್ ಪಾಟೀಲ್ ಕಾರ್ಯಕ್ರಮದಅಧ್ಯಕ್ಷತೆ ವಹಿಸಿ ಮಾತನಾಡಿದಅವರು,ಕನಕದಾಸರುಎಲ್ಲ ವರ್ಗದಜನರಿಗೂ ಸಮಾನಗೌರವ ನೀಡಬೇಕೆಂದು ಹೇಳಿ, ಮಾನವೀಯತೆ ಯಧ್ವಜವನ್ನು ಎತ್ತಿದರು. ಶಿಕ್ಷಣ, ಜ್ಞಾನ ಮತ್ತು ಶಾಂತಿಯ ಮಹತ್ವವನ್ನು ಬೋಧಿಸಿ, ಸಹಬಾಳ್ವೆಯ ಜೀವನಕ್ಕೆ ಮಾರ್ಗತೋರಿದರು ಎಂದರು.

ಕಾರ್ಯಕ್ರಮದಲ್ಲಿ ಪ್ರಭಾರಿ ಉಪಲೆಕ್ಕ ನಿಯಂತ್ರಣಅಧಿಕಾರಿ ಸೂರ್ಯಕಾಂತ್, ಕ.ವಿ.ಪ್ರ.ನಿ.ನಿ.ನೌ. ಸಂಘದ ಬೀದರ್ ಸಂಘಟನಾ ಕಾರ್ಯದರ್ಶಿ ಭರತ್ ಭೂಷಣ,ಕ.ವಿ.ಮಂ. ಪ.ಜಾ.ಪ.ವ. ಕಲ್ಯಾಣ ಸಂಸ್ಥೆ ಜೆಸ್ಕಾಂ ವೃತ್ತ ಬೀದರ ಸಂಘಟನಾ ಕಾರ್ಯದರ್ಶಿ ಬಸವರಾಜ್‌ಜೈನಾಪುರೆ, ಕನಕ ಜಯಂತಿಉತ್ಸವ ಸಮಿತಿ ಅಧ್ಯಕ್ಷರಾದರಾಜು ನಾಗಣ್ಣೋರ, ಕನಕ ಜಯಂತಿಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದ ರವೀಂದ್ರಕುಮಾರ್ ಶೇರಿಕಾರ, ಇದ್ದರು.

# ಕೈದಿಗಳಿಗೆ ರಾಜಾತಿಥ್ಯ, ತನಿಖೆಗೆ ಸಮಿತಿ

**ಬೆಂಗಳೂರು,ನ.10–**ಜೈಲಿನಲ್ಲಿರುವ ಕೈದಿಗಳು ಮೊಬೈಲ್, ಟಿವಿ ಇನ್ನಿತರ ಸೌಲಭ್ಯಗಳು ಸೇರಿದಂತೆ ಅಕ್ರಮವಾಗಿ ರಾಜಾತಿಥ್ಯ ಪಡೆಯುತ್ತಿರುವ ಸಂಬಂಧ ವಿಸ್ತೃತ ತನಿಖೆ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ಕಾನೂನು ಸುವ್ಯವಸ್ಥೆ ವಿಭಾಗದ ಪೊಲೀಸ್ ಮಹಾನಿರ್ದೇಶಕ(ಎಡಿಜಿಪಿ) ಆರ್ ಹಿತೇಂದ್ರ ಅವರ ನೇತೃತ್ವದಲ್ಲಿ ಐಜಿಪಿ ಸಂದೀಪ್ ಪಾಟೀಲ್ ಎಸ್ ಪಿಗಳಾದ ಅಮರನಾಥ ರೆಡ್ಡಿ ಹಾಗೂ ರಿಷ್ಯಂತ್ ಅವರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ಉನ್ನತ ಮಟ್ಟದ ಸಮಿತಿಯು ಅಕ್ರಮದ ಸಂಬಂಧ ತನಿಖೆ ನಡೆಸಿ ಒಂದು ತಿಂಗಳ ಒಳಗಾಗಿ ವರದಿ ನೀಡುವಂತೆ ಗಡುವು ನೀಡಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.ವಿಕೃತಕಾಮಿ ಉಮೇಶ್ ರೆಡ್ಡಿ ಮೊಬೈಲ್ ಬಳಸುತ್ತಾ ಟಿವಿ ನೋಡುತ್ತಿರುವ, ಲಷ್ಕರ್ ಉಗ್ರ ಮೊಬೈಲ್ ಬಳಸುತ್ತಿರುವುದು ಹಾಗೂ ಕೆಲ ಕೈದಿಗಳು ವಿಶೇಷ ಅತಿಥ್ಯ ಪಡೆದಿರುವ ದೃಶ್ಯಗಳು ಬಹಿರಂಗಗೊಂಡ ಬೆನ್ನಲ್ಲೇ ನಗರದ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಕಚೇರಿಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂಎ ಸಲೀಂ ಒಳಗೊಂಡು ಹಿರಿಯ ಅಧಿಕಾರಿಗಳ ಸಭೆ ನಡೆಸಿದರು.

ಸುಮಾರು ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಸಭೆಯಲ್ಲಿ ಅಕ್ರಮಗಳ ಸಂಬಂಧಿಸಿದಂತೆ ಸುಧೀರ್ಘ ಸಮಾಲೋಚನೆ ನಡೆಸಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ತೀರ್ಮಾನ ಕೈಗೊಂಡಿದ್ದಾರೆ.

**ಮೂವರು ಸಸ್ಪೆಂಡ್:**ಜೈಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.ಜೈಲಿನ ಮುಖ್ಯ ಅಧೀಕ್ಷಕ ಸುರೇಶ್, ಅಧೀಕ್ಷಕ ಮ್ಯಾಗೇರಿ, ಸಹಾಯಕ ಅಧೀಕ್ಷಕ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಜೈಲಿನಲ್ಲಿ ಕೈದಿಗಳ ಮೋಜು, ಮಸ್ತಿಯ ಬಗ್ಗೆ ಹಿರಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು ಕಾರಾಗೃಹದೊಳಗಿರುವ ಕೈದಿಗಳಿಗೆ ಮೊಬೈಲ್ ಫೋನ್‌ಗಳು ಸಿಕ್ಕಿದ್ದು ಹೇಗೆ? ಈಗ ವೈರಲ್ ಆಗಿರುವ ದೃಶ್ಯಗಳು ಯಾವಾಗ ಚಿತ್ರೀಕರಿಸಲ್ಪಟ್ಟಿವೆ ಎಂದು ಪ್ರಶ್ನಿಸಿದರು.

**ಅಧಿಕಾರಿಗಳಿಗೆ ತರಾಟೆ:**ವೈರಲ್ ಆಗಿರುವ ಫೋಟೋ, ವಿಡಿಯೋಗಳನ್ನು ಪ್ರದರ್ಶಿಸಿ ಪೊಲೀಸ್ ಅಧಿಕಾರಿಗಳನ್ನು ಗೃಹ ಸಚಿವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದು,ಇದರಿಂದ ಗೃಹ ಇಲಾಖೆಗೆ ಹಾಗೂ ಸರ್ಕಾರಕ್ಕೆ ಉಂಟಾಗಿರುವ ಮುಜುಗರವನ್ನು ಪ್ರಸ್ತಾಪಿಸಿ ಮುಂದೆ ಈ ರೀತಿಯ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ವಿ.ಶರತ್ ಚಂದ್ರ, ದಕ್ಷಿಣ ವಲಯ ಕಾರಾಗೃಹಗಳ ಮಹಾನಿರೀಕ್ಷಕಿ ಕೆ.ಸಿ.ದಿವ್ಯಶ್ರೀ, ಹೆಚ್ಚುವರಿ ಕಾರಾಗೃಹ ಮಹಾನಿರೀಕ್ಷಕ ಪಿ.ವಿ.ಆನಂದ್ ರೆಡ್ಡಿ, ಜಂಟಿ ಪೊಲೀಸ್ ಆಯುಕ್ತರಾದ ಅಜಯ್ ಹಿಲೋರಿ, ರಮೇಶ್ ಬಾನೋತ್, ವಂಶಿಕೃಷ್ಣ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದರು.

**ರಾಜಾತಿಥ್ಯ ವಿಡಿಯೋ ನಟ ದರ್ಶನ್ ಆಪ್ತ ಧನ್ವೀರ್ ಗೆ ಸಿಸಿಬಿ ಗ್ರಿಲ್**–ಪರಪ್ಪನ ಅಗ್ರಹಾರ



ಜೈಲಿನಲ್ಲಿರುವ ಕೈದಿಗಳಿಗೆ ರಾಜಾತಿಥ್ಯದ ವಿಡಿಯೋ ಬಿಡುಗಡೆಯಾದ ಬೆನ್ನಲ್ಲೇ ನಟ ದರ್ಶನ್ ಆಪ್ತ ಗೆಳೆಯ ನಟ ಧನ್ವೀರ್ ಅವರನ್ನು ಸಿಸಿಬಿ ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ.

ವಿಡಿಯೋ ಬಿಡುಗಡೆಯಾದ ಪ್ರಕರಣ ಪೊಲೀಸ್ ಇಲಾಖೆಗೆ ಮುಜುಗರ ತಂದ ಬೆನ್ನಲ್ಲೇ ಸಿಸಿಬಿ ಪೊಲೀಸರು ಈಗ ಧನ್ವೀರ್ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಈ ವಿಡಿಯೋಗಳನ್ನು ಧನ್ವೀರ್ ಬಿಡುಗಡೆ ಮಾಡಿದ್ದಾರೆ ಎಂಬ ಅನುಮಾನದ ಹಿನ್ನೆಲೆಯಲ್ಲಿ ಅವರನ್ನು ವಿಚಾರಣೆಗೆ ಒಳಪಡಿಸಿದೆ. ನಟ ಧನ್ವೀರ್ ಅವರ ಮೊಬೈಲ್ ಅನ್ನು ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಕ್ಕೆ ಕಳುಹಿಸಲಾಗಿದೆ. ಅನುಮಾನದ ಮೇರೆಗೆ ಧನ್ವೀರ್ ಅವರನ್ನು ಇಂದು ವಿಚಾರಣೆಗೆ ಒಳಪಡಿಸಲಾಗಿದೆ.

ದರ್ಶನ್‌ಗೆ ದಿಂಬು, ಹಾಸಿಗೆ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ದರ್ಶನ್ ಪರ ವಕೀಲರು ಬೇರೆ ಕೈದಿಗಳಿಗೆ ಜೈಲಿನಲ್ಲಿ ವಿಶೇಷ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಆದರೆ ದರ್ಶನ್ ಅವರಿಗೆ ಸವಲತ್ತುಗಳು ಸಿಗುತ್ತಿಲ್ಲ ಎಂದು ವಾದಿಸಿದ್ದರು.

**ಎನ್‌ಸಿಆರ್ ದಾಖಲು:**ಈ ನಡುವೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿಗಳು ಮೊಬೈಲ್, ಟಿವಿ ಬಳಕೆ ಪ್ರಕರಣ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ ದೂರು ದಾಖಲಾಗಿದೆ. ಜೈಲಿನಲ್ಲಿ ನಿಷೇಧವಿದ್ದರೂ ಮೊಬೈಲ್ ಬಳಕೆ ಮಾಡಿ ವಿಡಿಯೋ ಚಿತ್ರೀಕರಣವಾಗಿದೆ. ರೇಪಿಸ್ಟ್ ಉಮೇಶ್ ರೆಡ್ಡಿ, ಐಸಿಸ್ ಟೆರರಿಸ್ಟ್ ಜುಹಾದ್ ಹಮೀಲ್ ಶಕೀಲ್ ಮನ್ನಾ ಹಾಗೂ ಗೋಲ್ಡ್ ಸ್ಮಗ್ಲರ್ ತರುಣ್ ಕೊಂಡೂರ್‌ನಿಂದ ಮೊಬೈಲ್ ಬಳಕೆ ಮಾಡಲಾಗಿತ್ತು. ಟಿವಿ ನೋಡ್ತಾ ಮೊಬೈಲ್‌ನಲ್ಲಿ ಮಾತಾಡ್ತಿದ್ದ ವಿಡಿಯೋ ಚಿತ್ರೀಕರಿಸಿ ವೈರಲ್ ಮಾಡಲಾಗಿದೆ.

ಅನುಮತಿ ಇಲ್ಲದೆ ಬಳಕೆ ಹಾಗೂ ವಿಡಿಯೋ ಚಿತ್ರೀಕರಣ ಹಿನ್ನೆಲೆ, ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ದೂರು ನೀಡಲಾಗಿದೆ. ದೂರಿನ ಅನ್ವಯ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎನ್‌ಸಿಆರ್ ದಾಖಲಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ವಿಧಾನಸೌಧದ ಟೆರರಿಸ್ಟ್ ತುಂಬಾ ಅಪಾಯಕಾರಿ : ಹೆಚ್.ಡಿ.ಕುಮಾರಸ್ವಾಮಿ

**ಬೆಂಗಳೂರು, ನ.10–** ವಿಧಾನಸೌಧದ ಲ್ಲಿರುವ ಟೆರರಿಸ್ಟ್‌ಗೂ ಪರಪನ ಅಗ್ರಹಾರದಲ್ಲಿ ರುವ ಟೆರರಿಸ್ಟ್‌ಗೂ ಯಾವುದೇ ವ್ಯತ್ಯಾಸವಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸೌಧದ ಟೆರರಿಸ್ಟ್ ಯಾರೆಂದು ನನ್ನಗಿಂತ ಮಾಧ್ಯಮದವರಿಗೆ ಚೆನ್ನಾಗಿ ಗೊತ್ತಿದೆ. ವಿಧಾನಸೌಧದಲ್ಲಿರುವ ಟೆರರಿಸ್ಟ್ ಇವರಿಗಿಂತ ತುಂಬಾ ಅಪಾಯಕಾರಿ. ಈ ಬಗ್ಗೆ ಜನರು ಮಾತನಾಡುತ್ತಾರೆ ಎಂದರು.

ಜೈಲಿನಲ್ಲಿ ಖೈದಿಗಳಿಗೆ ರಾಜಾತಿಥ್ಯ ನೀಡಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಜೈಲಿನಲ್ಲಿ ಸೌಲಭ್ಯ ನೀಡಿರುವ ಬಗ್ಗೆ ಚರ್ಚೆ ಆಗುತ್ತಿದ್ದು, ಇದು ಏನು ಹೊಸದಾಗಿ ಶುರುವಾಗಿಲ್ಲ. ಈ ಹಿಂದೆ ಹಿರಿಯ ಅಧಿಕಾರಿಗಳ ವಿಚಾರದಲ್ಲಿ ಘರ್ಷಣೆ ಆಗಿತ್ತು. ಅಧಿಕಾರಿಗಳ ನಡುವೆಯೇ ರಾಜಕಾರಣ ನಡೆಯುತ್ತಿದೆ. ಗೃಹ ಸಚಿವರು ಏನು ತನಿಖೆ ಮಾಡುತ್ತಾರೆ? ಎಂದು ಪ್ರಶ್ನಿಸಿದರು. ಮಾಧ್ಯಮಗಳು ಅಲ್ಲಿ ದೊರಕಿರುವ ಸೌಲಭ್ಯಗಳ ಬಗ್ಗೆ ತೋರಿಸಿವೆ. ಈಗ ಮತ್ತೆ ತನಿಖೆ ಮಾಡಿ ಏನು ಮಾಡುತ್ತಿರಾ? ಸುಮನೇ ಕಾಲ ಹರಣ ಮಾಡುತ್ತಿ?ರಾ ಎಂದ ಅವರು, ಇದೆಲ್ಲಕ್ಕೂ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನೆ? ಕೇಳಬೇಕು. ಆಡಳಿತ ವೈಫಲ್ಯ ಸರ್ಕಾರದಲ್ಲಿ ಎದ್ದು ಕಾಣುತ್ತಿದೆ ಎಂದರು.

ಮುಖ್ಯಮಂತ್ರಿಗಳು ಬಿಜೆಪಿಯವರಿಗೆ ಮಾನ ಮರ್ಯಾದೆ ಇಲ್ಲ ಎಂದು ಹೇಳಿದ್ದರೂ, ಈಗ ನಿಮಗೆ ಇದೆಯೇ ಮಾಹಿತಿ ತಗೊಂಡು ಮುಖ್ಯಮಂತ್ರಿ ಮಾತನಾಡುತ್ತಾರಂತೆ. ಇವರಿಗೆ ಇಂಟಲಿಜೆನ್ ಇರಲ್ವಾ ಎಂದು ಪ್ರಶ್ನಿಸಿದರು. ಒತ್ತಡ ಹಾಕಿದ ತಕ್ಷಣ ರಾಜೀನಾಮೆ ಕೊಡುವ ಕಾಲವೇ ಇದು ಅಷ್ಟೊಂದು ನೈತಿಕತೆ ಯಾವ ರಾಜಕಾರಣಿಗಳಿಗೆ ಇದೆ ಎಂದು ಗೃಹ ಸಚಿವರ ರಾಜೀನಾಮೆ ವಿಚಾರಕ್ಕೆ ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ವಿಮಾನ ನಿಲ್ದಾಣದಲ್ಲಿ ನಮಾಜ್ ಮಾಡಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಬೆಂಗಳೂರು ಅಂತಾರಾಷ್ಟ್ರಿ?ಯ ಮಟ್ಟಕ್ಕೆ ಬೆಳೆದಿದೆ. ಅನೇಕ ಜನರು ಬರುತ್ತಾರೆ. ಬೇರೆ ದೇಶದಲ್ಲಿ ಪ್ರತ್ಯೆ?ಕ ಕೊಠಡಿ ಕೊಡುತ್ತಾರೆ. ಇಲ್ಲಿ ಹಲವಾರು ಧರ್ಮದ ಜನರು ಬರುತ್ತಾರೆ. ಅವರವರ ಧರ್ಮ ಅವರು ಪಾಲಿಸಬೇಕು. ನಾವು ಸಣ್ಣತನ ತೋರೋದಲ್ಲ, ಅವರಿಗೊಂದು ಕೊಠಡಿ ಮಾಡಿಕೊಡಬೇಕು ಎಂದರು.

# ಜೈಲಿನಲ್ಲಿ ರಾಜಾತಿಥ್ಯ ಪ್ರಕರಣ : ಸಿಎಂ ಮನೆಗೆ ಮುತ್ತಿಗೆ ಯತ್ನ ಬಿಜೆಪಿ ನಾಯಕರು ವಶಕ್ಕೆ

# ಇಬ್ಬರ ಅಧಿಕಾರಿಗಳ ಅಮಾನತು

**ಬೆಂಗಳೂರು, ನ.10–** ಜೈಲುಗಳಲ್ಲಿ ರಾಜಾತಿಥ್ಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಮಗ್ರ ಪರಿಶೀಲನೆ ನಡೆಸಿ, ವರದಿ ನೀಡಲು ಎಡಿಜಿಪಿ ಹಂತದ ಅಧಿಕಾರಿಯ ನೇತೃತ್ವದಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲಾಗಿದೆ. ಪ್ರಸ್ತುತ ಘಟನೆಗೆ ಸಂಬಂಧಪಟ್ಟಂತೆ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಲಾಗಿದ್ದು, ಮತ್ತಿಬ್ಬರನ್ನು ಅಮಾನತು ಗೊಳಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು.

ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಕಚೇರಿಯಲ್ಲಿಂದು ಉನ್ನತ ಮಟ್ಟದ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉನ್ನತಾಧಿಕಾರ ಸಮಿತಿಗೆ ಕಾನೂನು ಮತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆರ್. ಹಿತೇಂದ್ರ ಅವರನ್ನು ಮುಖ್ಯಸ್ಥನಾಗಿ ನೇಮಿಸಲಾಗಿದೆ.

ಐಜಿ ಸಂದೀಪ್ ಪಾಟೀಲ್, ಎಸ್‌ಪಿಗಳಾದ ಅಮರ್‌ನಾಥ್ ರೆಡ್ಡಿ, ರಿಶಾಂತ್ ಅವರನ್ನೊಳಗೊಂಡ ನಾಲ್ವರ ಸಮಿತಿಯನ್ನು ರಚಿಸಿದ್ದು, ಒಂದು ತಿಂಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಎಸ್ಪಿಗಳು ಸಮಿತಿಯ ಸಹ ಸದಸ್ಯರಾಗಿರುತ್ತಾರೆ ಎಂದರು. ಈ ಸಮಿತಿ ರಾಜ್ಯದಲ್ಲಿರುವ ಎಲ್ಲಾ ಜೈಲುಗಳಲ್ಲಿನ ಲೋಪಗಳನ್ನು ಪತ್ತೆ



ಹಚ್ಚಿ ಮತ್ತು ಪ್ರಸ್ತುತ ಸಂದರ್ಭದ ವಿದ್ಯಮಾನಗಳನ್ನು ತನಿಖೆ ನಡೆಸಿ ವರದಿ ನೀಡಲಿದೆ ಎಂದರು.

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮುಖ್ಯ ಜೈಲು ಅಧೀಕ್ಷಕ ಕೆ. ಸುರೇಶ್ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಆ ಸ್ಥಾನಕ್ಕೆ ಐಪಿಎಸ್ ಅಧಿಕಾರಿಯನ್ನು ನಿಯೋಜಿಲಾಗುತ್ತದೆ. ಇನ್ನು ಮುಂದೆ ಪರಪ್ಪನ ಅಗ್ರಹಾರ ಜೈಲು ನಿರ್ವಾಹಣೆಯನ್ನು ಐಪಿಎಸ್ ಅಧಿಕಾರಿಯೇ ನೋಡಿಕೊಳ್ಳಲಿದ್ದಾರೆ. ಜೈಲು ಅಧೀಕ್ಷಕ ಮ್ಯಾಗೇರಿ ಹಾಗೂ ಸಹಾಯಕ ಅಧೀಕ್ಷಕ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದರು.





**ಬೆಂಗಳೂರು, ನ. 10–** ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಖೈದಿಗಳಿಗೆ ರಾಜ್ಯಾತಿಥ್ಯ ನೀಡುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ರವರ ರಾಜೀನಾಮೆಗೆ ಆಗ್ರಹಿಸಿ ಮುಖ್ಯಮಂತ್ರಿಗಳ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ನಾಯಕರುಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.

ಜೈಲುಗಳಲ್ಲಿ ಖೈದಿಗಳಿಗೆ ರಾಜ್ಯಾತಿಥ್ಯ ಸಿಗುತ್ತಿದೆ. ಇದಕ್ಕೆ ಹೊಣೆ ಹೊತ್ತು ಮುಖ್ಯಮಂತ್ರಿಗಳು, ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರುಗಳಾದ ಆರ್. ಅಶೋಕ್, ಚಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿಯ ಶಾಸಕರು, ಕಾರ್ಯಕರ್ತರು ಇಂದು ಮುಖ್ಯಮಂತ್ರಿಗಳ ಮನೆಗೆ ಮುತ್ತಿಗೆ ಹಾಕಲು ಮುಂದಾದಾಗ ಅವರನ್ನು ತಡೆದ ಪೊಲೀಸರು ಎಲ್ಲ ನಾಯಕರನ್ನು ವಶಕ್ಕೆ ಪಡೆದು, ಪೊಲೀಸ್ ವ್ಯಾನ್ ಹತ್ತಿಸಿಕೊಂಡು ಮುಖ್ಯಮಂತ್ರಿಗಳ ಮನೆ ಮುತ್ತಿಗೆ ಪ್ರಯತ್ನವನ್ನು ವಫಲಗೊಳಿಸಿದರು.ಜೈಲಿನಲ್ಲಿ ಖೈದಿಗಳಿಗೆ ರಾಜ್ಯಾತಿಥ್ಯ ನೀಡುತ್ತಿರುವುದನ್ನು ಖಂಡಿಸಿ ಬಿಜೆಪಿ ನಾಯಕರುಗಳು ಘೋಷಣೆಗಳನ್ನು ಕೂಗಿದರು.

**ಜೈಲು ನೈಟ್ ಕ್ಲಬ್ ಆಗಿದೆ:ಬಿವೈವಿ**–ಈ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರದ, ಪರಪ್ಪನ ಅಗ್ರಹಾರ ಜೈಲು ಒಂದ ರೀತಿ ನೈಟ್ ಕ್ಲಬ್ ಆಗಿದೆ.

ಭಯೋತ್ಪಾದಕರು, ಐಎಸ್‌ಐ ಏಜೆಂಟರು ಮುಸ್ಲಿಂ ಮೂಲಭೂತವಾದಿಗಳು ಎಲ್ಲರಿಗೂ ಪರಪ್ಪನ ಅಗ್ರಹಾರ ಜೈಲು ಮನರಂಜನಾ ಕ್ಲಬ್ ಆಗಿದೆ. ಇಂತಹ ದೇಶ ದ್ರೋಹಿಗಳಿಗೆ ಟಿವಿ, ಮೊಬೈಲ್ ಫೋನ್, ಗುಂಡು ತುಂಡುಗಳ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ದೂರಿದರು. ಜೈಲಿನಲ್ಲಿ ಖೈದಿಗಳಿಗೆ ರಾಜ್ಯಾತಿಥ್ಯ ನೀಡುತ್ತಿರುವುದು ಗೊತ್ತಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಸರ್ಕಾರದ ಕುಮ್ಮಕ್ಕಿನ 'ಲ್ಲಿಂದಲೇ ದೇಶ ದ್ರೋಹಿಗಳಿಗೆ ಜೈಲಿನಲ್ಲಿ ಐಷರಾಮಿ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿಲ್ಲದೆ ಜೈಲಿನಲ್ಲಿ ಈ ವ್ಯವಸ್ಥೆ ಆಗಲು ಸಾಧ್ಯವಿಲ್ಲ. ಉಗ್ರರಿಗೆ ಇಸ್ಲಾಂ ಮೂಲಭೂತವಾದಿಗಳಿಗ ಈ ರೀತಿ ರಾಜ್ಯಾತಿಥ್ಯ ಕಲ್ಪಸಿರುವುದು ದೇಶ ದ್ರೋಹದ ಕೆಲಸ. ಇದಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ರವರೇ ಹೊಣೆಗಾರರು ಇವರಿಬ್ಬರೂ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.ಇದೇ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮ ಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮಶ್ವರ್ ರವರು ಹಾಟ್‌ಲೈನ್ ಮೂಲಕ ಈ ಜೈಲಿನಿಂದ ಪಾಕಿಸ್ತಾನ ಆಫಘಾನಿಸ್ತಾನಕ್ಕೆ ಕರೆಗಳು ಹೋಗುತ್ತಿವೆ. ಎರಡು ವರ್ಗಳಿಂದ ಇವರು ಕತ್ತೆ ಕಾಯುತ್ತಿದ್ದರಾ, ಪೊಲೀಸ್ ಠಾಣೆಗಳನ್ನು ಕಾಂಗ್ರೆಸ್ ಕಚೇರಿಗಳನ್ನಾಗಿ ಮಾಡಿದ್ದಾರೆ ಎಂದು ಆರೋಪಿಸಿದರು.ಜೈಲಿನಲ್ಲಿ ನಟ ದರ್ಶನ್ ಸಿಗರೇಟ್ ಸೇದಿದ್ದಕ್ಕೆ ಅವರ ಬೇಲನ್ನು ಸುಪ್ರೀಂ ಕೋರ್ಟ್‌ಗೆ ಹೋಗಿ ರದ್ದು ಮಾಡಿದರು.

ಹಾಗಂತ ನಟ ದರ್ಶನ್ ಸಿಗರೇಟ್ ಸೇದಿದ್ದು ಸರಿ ಎಂದು ಹೇಳುತ್ತಿಲ್ಲ ಅದು ತಪ್ಪು. ಅದೇ ರೀತಿ ಕ್ರಮ ಈಗ ಏಕೆ ಆಗುತ್ತಿಲ್ಲ ಎಂದು ಪ್ರಶ್ನಿಸಿದರು. ಜೈಲಿನಲ್ಲಿ ಗಾಂಜಾ, ಬಿರಿಯಾನಿ ಮೊಬೈಲ್ ಎಲ್ಲವೂ ಸಿಗುತ್ತಿದ. ಜೈಲಿಗೆ ಹೋದರೆ ರಾಜ್ಯಾತೀಥ್ಯ ಫ್ರೀ ಇದು ಕಾಂಗ್ರೆಸ್‌ನ ಬಿಟ್ಟಿ ಗ್ಯಾರಂಟಿ ಎಂದು ವ್ಯಂಗ್ಯವಾಡಿದರು.

ರಾಜ್ಯದಲ್ಲಿ ಸರ್ಕಾರ ಸತ್ತು ಹೋಗಿದೆ. ಶವಯಾತ್ರೆ ನಡೆದಿದೆ. ಶವವನ್ನು ಮುಂದೆ ಯಾರು ಹೊರಬೇಕು, ಹಿಂದೆ ಯಾರು ಹೊರಬೇಕು ಎಂಬ ವಿಚಾರಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಕಚ್ಚಾಟ ನಡೆದಿದೆ. ಇವರ ಕಚ್ಚಾಟದಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದು ಬಿದ್ದಿದೆ ಎಂದು ವಾಗ್ದಾಳಿ ನಡೆಸಿದರು ವಿಧಾನಪರಿತ್‌ನ ಪ್ರತಿಪಕ್ಷ ನಾಯಕ ಚಲವಾದಿ ನಾರಾಯಣಸ್ವಾಮಿ ಮಾತನಾಡಿ, ಭಯೋತ್ಪಾದಕರಿಗೆ ಜೈಲಿನಲ್ಲಿ ಎಲ್ಲ ಸೌಲಭ್ಯ ನೀಡಲು ರಾಜ್ಯ ಸರ್ಕಾರ ಬಂದಂತಿದೆ ಎಂದು ಹರಿಹಾಯ್ದು, ಈ ಸರ್ಕಾರ ಯಾರ ಪರವಾಗಿದೆ ಎಂಬುದು ಗೊತ್ತಾಗಬೇಕು. ಜೈಲಿನಲ್ಲಿ ಬಿರಿಯಾನಿ ಪಾರ್ಟಿ ಇದೆ ಇದೇನಾ ಜೈಲು ವ್ಯವಸ್ಥೆ ಎಂದು ಹರಿಹಾಯ್ದರು.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ಈಗ ರೆಸಾರ್ಟ್‌ಗೆ ಹೋಗುವ ಅಗತ್ಯವಿಲ್ಲ ಜೈಲಿನಲ್ಲೇ ಎಲ್ಲ ಸವಲತ್ತುಗಳು ಸಿಗುತ್ತಿವೆ. ಈ ಸರ್ಕಾರಕ್ಕೆ ನಾಚಿಕೆ ಆಗಬೇಕು. ಜೈಲು ರಾಜ್ಯಾತೀಥ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ, ಗೃಹ ಸಚಿವರು ರಾಜೀನಾಮೆ ಕೊಡಬೇಕು ಈ ಪ್ರಕರಣವನ್ನು ಎನ್‌ಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

# 1.75 ಲಕ್ಷ ಭಾರತೀಯರಿಗೆ ಹಜ್ ಪ್ರವಾಸ ಭಾಗ್ಯ

**ನವದೆಹಲಿ, ನ. 10–**ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಜೆಡ್ಡಾದಲ್ಲಿ ದ್ವಿಪಕ್ಷೀಯ ಹಜ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ, 2026 ರಲ್ಲಿ ಭಾರತಕ್ಕೆ ಹಜ್‌ಯಾತ್ರೆಗೆ 175,025 ಕೋಟಾ ದೃಢಪಡಿಸಲಾಗಿದೆ. ನವೆಂಬರ್ 7 ರಿಂದ 9 ರವರೆಗೆ ಸೌದಿ ಅರೇಬಿಯಾಕ್ಕೆ ಅಧಿಕೃತ ಭೇಟಿ ನೀಡಿದ್ದ ರಿಜಿಜು, ನಿನ್ನೆ ಜೆಡ್ಡಾದಲ್ಲಿ ಸೌದಿ ಹಜ್ ಮತ್ತು ಉಮ್ರಾ ಸಚಿವ ತೌಫಿಕ್ ಬಿನ್ ಫೌಜಾನ್ ಅಲ್ ರಬಿಯಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು.

ಸಭೆಯ ಸಮಯದಲ್ಲಿ, ಇಬ್ಬರೂ ಸಚಿವರು ನಡೆಯುತ್ತಿರುವ ಹಜ್ ಸಿದ್ಧತೆಗಳನ್ನು ಪರಿಶೀಲಿಸಿದರು, ಸಮನ್ವಯ ಮತ್ತು ಸಾಗಣೆ ಬೆಂಬಲವನ್ನು ಹೆಚ್ಚಿಸುವ ಕ್ರಮಗಳ ಬಗ್ಗೆ ಚರ್ಚಿಸಿದರು ಮತ್ತು ಭಾರತೀಯ ಯಾತ್ರಿಕರಿಗೆ ತೀರ್ಥಯಾತ್ರೆ ಪ್ರಕ್ರಿಯೆಯನ್ನು ಮತ್ತಷ್ಟು ಸುಗಮಗೊಳಿಸಲು ತಮ್ಮ ಹಂಚಿಕೆಯ ಬದ್ಧತೆಯನ್ನು ಪುನರುಚ್ಚರಿಸಿದರು ಎಂದು ಅಧಿಕೃತ ಹೇಳಿಕೆ ತಿಳಿಸಿದೆ. ಸುಗಮ ಮತ್ತು ಆರಾಮದಾಯಕ ತೀರ್ಥಯಾತ್ರೆಯ ಅನುಭವವನ್ನು ಖಚಿತಪಡಿಸಿಕೊಳ್ಳಲು ಸೌಲಭ್ಯಗಳು, ಸಾರಿಗೆ, ವಸತಿ ಮತ್ತು ಆರೋಗ್ಯ ಸೇವೆಗಳನ್ನು ಸುಧಾರಿಸುವತ್ತ ಚರ್ಚೆಗಳು ಗಮನಹರಿಸಿದವು.ಸಭೆಯ ನಂತರ, ಎರಡೂ ಕಡೆಯವರು ಜೆಡ್ಡಾದಲ್ಲಿ ಹಜ್ –2026 ಗಾಗಿ ಭಾರತ ಮತ್ತು ಸೌದಿ ಅರೇಬಿಯಾ ಸಾಮ್ರಾಜ್ಯದ ನಡುವೆ ದ್ವಿಪಕ್ಷೀಯ ಹಜ್ ಒಪ್ಪಂದಕ್ಕೆ ಸಹಿ ಹಾಕಿದರು.

ಭಾರತಕ್ಕೆ ಯಾತ್ರೆ ಕೈಗೊಳ್ಳಲು 175,025 ಭಾರತೀಯ ಯಾತ್ರೆ ಕೋಟಾ ದೃಢಪಡಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.ಈ ಭೇಟಿಯ ಸಮಯದಲ್ಲಿ, ರಿಯಾದ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಮತ್ತು ಜೆಡ್ಡಾದ ಭಾರತದ ಕಾನ್ಸುಲೇಟ್ ಜನರಲ್ ಅಧಿಕಾರಿಗಳೊಂದಿಗೆ ಆಂತರಿಕ ಪರಿಶೀಲನಾ ಸಭೆಯನ್ನು ನಡೆಸಿ, ಹಜ್ 2026 ಕ್ಕೆ ನಡೆಯುತ್ತಿರುವ ಸಿದ್ಧತೆಗಳನ್ನು ನಿರ್ಣಯಿಸಿದರು.

ಭಾರತೀಯ ಯಾತ್ರಿಕರ ಕಲ್ಯಾಣ ಮತ್ತು ಸೌಕರ್ಯವನ್ನು ಖಚಿತಪಡಿಸಿಕೊಳ್ಳಲು ಸೌದಿ ಅಧಿಕಾರಿಗಳೊಂದಿಗೆ ನಿಕಟ ಸಮನ್ವಯದಲ್ಲಿ ಮಿಷನ್ ಮತ್ತು ಕಾನ್ಸುಲೇಟ್ ತಂಡಗಳು ಮಾಡಿದ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.ಯಾತ್ರಿಕರಿಗೆ ಲಭ್ಯವಿರುವ ಮೂಲಸೌಕರ್ಯ ಮತ್ತು ಸೌಲಭ್ಯಗಳ ಬಗ್ಗೆ ನೇರವಾಗಿ ಒಳನೋಟವನ್ನು ಪಡೆಯಲು ಸಚಿವರು ಜೆಡ್ಡಾದ ಟರ್ಮಿನಲ್ 1 ಮತ್ತು ಹರಮೈನ್ ನಿಲ್ದಾಣ ಸೇರಿದಂತೆ ಜೆಡ್ಡಾದ ಮತ್ತು ತೈಫ್‌ನಲ್ಲಿರುವ ಪ್ರಮುಖ ಹಜ್ ಮತ್ತು ಉಮ್ರಾ ಸಂಬಂಧಿತ ಸ್ಥಳಗಳಿಗೆ ಕ್ಷೇತ್ರ ಭೇಟಿಗಳನ್ನು ಸಹ ನಡೆಸಿದರು ಎಂದು ಹೇಳಿಕೆ ತಿಳಿಸಿದೆ.

ಅವರು ಜೆಡ್ಡಾದ ಮತ್ತು ತೈಫ್‌ನಲ್ಲಿರುವ ಭಾರತೀಯ ವಲಸಿಗರ ಕೆಲವು ಸದಸ್ಯರೊಂದಿಗೆ ಸಂವಹನ ನಡೆಸಿದರು.ಭಾರತ–ಸೌದಿ ಅರೇಬಿಯಾ ಸಂಬಂಧಗಳನ್ನು ಗಾಢಗೊಳಿಸುವಲ್ಲಿ ಮಹತ್ವದ ಹೆಜ್ಜೆ. ಸೌದಿ ಅರೇಬಿಯಾ ಸಾಮ್ರಾಜ್ಯದ ಹಜ್ ಮತ್ತು ಉಮ್ರಾ ಸಚಿವರಾದ ಗೌರವಾನ್ವಿತ ಡಾ. ತೌಫಿಕ್ ಬಿನ್ ಫೌಜಾನ್ ಅಲ್?–ರಬಿಯಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿ ದ್ವಿಪಕ್ಷೀಯ ಹಜ್ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಯುವ ಮಾರ್ಗ



# ಶ್ರೀ ನಾರಾಯಣತೀರ್ಥರ 52 ನೇ ಪೂರ್ವಾರಾಧನೆ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.10** ಪಟ್ಟಣದ ಶ್ರೀ ನಾರಾಯಣ ತೀರ್ಥರ ಆಶ್ರಮದಲ್ಲಿ ಶ್ರೀ ನಾರಾಯಣ ತೀರ್ಥರ 52 ನೇ ಆರಾಧನೆಯ ಪೂರ್ವರಾಧನೆ ಅಂಗವಾಗಿ ಬೆಳಿಗ್ಗೆ ನಿರ್ಮಾಲ್ಯ ವಿಸರ್ಜನೆ,ರಾಯರ ಅಷ್ಟೋತ್ತರ ಪಾರಾಯಣ,ಫಲ ಪಂಚಾಮೃತಾಭಿಷೇಕ,ಅಲಂಕಾರ ನಡೆಯಿತು. ,ಸ್ವಯಂವ್ಯಕ್ತ ವಾಯುದೇವರಿಗೆ ಮಧು ಅಭಿಷೇಕದಿಂದ ವಾಯುಸ್ತುತಿ ಪುನಶ್ಚರಣ ನಡೆಯಿತು. ರಾಯಚೂರಿನ ಸುರೇಶ್ ಅಚಾರ್ ನೇತೃತ್ವದಲ್ಲಿ ಯಜು ಸಂಹಿತೆ ಯಾಗ ನಡೆಯಿತು

ಪಂ.ಜಯತೀರ್ಥಾಚಾರ್ಯ ಹೈದರಾಬಾದ್,ಪಂ.ಪ್ರಾಣೇಶಾಚಾರ್ಯ ಹೈದ್ರಾಬಾದ್ ಮತ್ತು ಪಂ.ಗುರುರಾಜ ದಾಸ ಬೆಂಗಳೂರು ರವರು ಶ್ರೀ ನಾರಾಯಣ ತೀರ್ಥರ ಕುರಿತು ಪ್ರವಚನ ಹಾಗೂ ಭಾಗವತ ಪುರಾಣ ಪ್ರವಚನ ನೆರವೇರಿಸಿದರು. ಸಮಗ್ರ ಶ್ರೀ ಹರಿಕಥಾಮೃತಸಾರ ಗ್ರಂಥದ ಪಾರಾಯಣ ಸಂಜೆ ಪಲ್ಲಕ್ಕಿಸೇವೆ,ಸ್ವಸ್ತಿವಾಚನ ನಡೆಯಿತು.

ಆಶ್ರಮದ ವ್ಯವಸ್ಥಾಪಕರಾದ ಕೃಷ್ಣಮೂರ್ತಿ,ಡಾ.ವಿಜಯರಾವ ಕುಪನೇಶಿ,ಬ್ರಾಹ್ಮಣ ಸಮಾಜದ ಅಧ್ಯಕ್ಷ ಮುದ್ದುರಂಗರಾವ ಮುತಾಲಿಕ,ಮುಖಂಡರಾದ ಭೀಮಸೇನರಾವ.ಟಿ.ವೆಂಕೋಬರಾವ ಹರನಳ್ಳಿ,ಶ್ರೀಧರ ಮಾಸ್ಟರ್,ನರಸಿಂಹಾಚಾರ್ಯ ಜಾನೇಕಲ್,ಸೇರಿದಂತೆ ಪಟ್ಟಣದ ಬ್ರಾಹ್ಮಣಸಮಾಜದವರು ಹಾಗೂ ವೈಶ್ಯಸಮಾಜದವರು ಹಾಗೂ ಸಾವಿರಾರು ಭಕ್ತರು ಆರಾಧನೆಯಲ್ಲಿ ಭಾಗವಹಿಸಿದರು.

# ಶ್ರೀವೀರಭದ್ರೇಶ್ವರ ಹಾಗೂ ಪವಾಡಿ ಬಸವೇಶ್ವರ 21 ನೇ ಕಾರ್ತಿಕೋತ್ಸವ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.10**–ಪಟ್ಟಣದ ಶ್ರೀವೀರಭದ್ರೇಶ್ವರ ಹಾಗೂ ಪವಾಡಿ ಬಸವೇಶ್ವರ ದೇವಸ್ಥಾನದಲ್ಲಿ ಸೋಮವಾರ ಕಾರ್ತಿಕ ಮಾಸದ 21 ನೇ ಕಾರ್ತಿಕೋತ್ಸವ , ಅಂಗವಾಗಿ ಬೆಳಿಗ್ಗೆ ಶ್ರೀ ಶ್ರೀವೀರಭದ್ರೇಶ್ವರಸ್ವಾಮಿ ಹಾಗೂ ಪವಾಡಿ ಬಸವೇಶ್ವರ ಮೂರ್ತಿಗೆ ಬೆಳಿಗ್ಗೆ ರುದ್ರಾಭಿಷೇಕ ನಡೆಸಲಾಯಿತು ಪಟ್ಟಣದ ಹಿರೇಬಾವಿಯಲ್ಲಿ ಗಂಗೆ ಪೂಜೆ ನೆರವೇರಿಸಿ ಸುಮಂಗಲಿಯರು ಕಂಭ,ಕಳಸ ,ಪುರವಂತಿಕೆಯವರೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನಿಟ್ಟು ದೇವಸ್ಥಾನದ ವರೆಗೆ ಪಲ್ಲಕ್ಕಿ ಮೆರವಣಿಗೆ ನಡೆಯಿತು. ಹರಕ್ಕೆ ಹೋತ್ತಂತ ಭಕ್ತರು ದೇವಸ್ಥಾನದ ಆಗ್ನಿಗುಂಡದಲ್ಲಿ ಬೆಂಕಿಯನ್ನು ತುಳಿದು ಹರಕೆ ತಿರಿಸಿ ಶ್ರೀವೀರಭದ್ರೇಶ್ವರ ಹಾಗೂ ಪವಾಡಿ ಬಸವೇಶ್ವರನಿಗೆ ಹಣ್ಣು,ಕಾಯಿ ಸಮರ್ಪಿಸಿ ವಿಶೇಷ ಪೂಜೆ ಸಲ್ಲಿಸಿದರು.

ಸಂಜೆ ಸಾವಿರಾರು ಭಕ್ತರು ಕಾರ್ತಿಕ ದೀಪವನ್ನು ಬೆಳಗಿಸಿ ರಥೋತ್ಸವ ನೆರವೇರಿಸಿದರು. ವಿವಿಧ ಭಜನಾ ಮಂಡಳಿಯವರಿಂದ ಭಜನೆ ನಡೆಯಿತು. ಭಕ್ತರಿಗೆ ಅನ್ನದಾಸೋಹ ನೆರವೇರಿಸಲಾಯಿತು.

# ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರು ವಶ




**ಕಲಬುರಗಿ,ನ.10**–ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ 51 ಸಾವಿರ ರೂ.ಮೊತ್ತದ 3 ಜಾನುವಾರು ಮತ್ತು 4 ಲಕ್ಷ ರೂ.ಮೊತ್ತದ ಗೂಡ್ಸ್ ವಾಹನವನ್ನು ಸಬ್ ಅರ್ಬನ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹುಮನಾಬಾದ ರಿಂಗ್ ರೋಡ್ ಕಡೆಯಿಂದ ಅವರಾದ (ಬಿ) ಕಡೆಗೆ ಟಾಟಾ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇಲೆ ಪಿಎಸ್ಐ ಶಶಿಕಲಾ ಮತ್ತು ಸಿಬ್ಬಂದಿ ಶಶಿಕಾಂತ ಅವರು ದಾಳಿ ನಡೆಸಿ ಗೂಡ್ಸ್ ವಾಹನ ಮತ್ತು ಜಾನುವಾರುಗಳನ್ನು ವಶಕ್ಕೆ ಪಡೆದುಕೊಂಡು ಗೂಡ್ಸ್ ವಾಹನ ಚಾಲಕ ಕಲಬುರಗಿಯ ಜುಬೇರ್ ಕಾಲೋನಿಯ ಹಸನ್ ತಂದೆ ಅಬ್ದುಲ್ ರಹೀಂ ಮತ್ತು ಮಾಲೀಕ ಮೋಮಿನ ಪುರದ ಶಹಬಾಜ್ ವಿರುದ್ಧ ದೂರು ದಾಖಲಿಸಿಕೊಂಡಿದ್ದಾರೆ. ಜಾನುವಾರುಗಳನ್ನು ಮೋಮಿನಪುರದಿಂದ ಚಿಟಗುಪ್ಪಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿತ್ತು ಎಂದು ತಿಳಿದುಬಂದಿದೆ. ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕರ್ನಾಟಕ ಪ್ರಜಾಸತ್ತಾತ್ಮಕ ರಂಗ ಸಂಘಟನೆ ಅಸ್ತಿತ್ವಕ್ಕೆ

ಯುವ ಮಾರ್ಗ ಸುದ್ದಿ



**ಸಿಂಧನೂರು,ನ.10**– ನಗರದ ಸರ್ಕ್ಯೂಟ್ ಹೌಸ್ ನಲ್ಲಿ ತಾಲೂಕಿನ ಪ್ರಮುಖಬುದ್ಧಿ ಜೀವಿಗಳು, ಚಿಂತಕರು, ಸ ಮಾನ ಮನಸ್ಕರು ಹಾಗೂ ಸಾಮಾಜಿಕ ಮುಖಂಡರು ಇಂದು ಸಭೆ ನಡೆಸಿ ಹೊಸ ಸಂಘಟನೆಯನ್ನು ಸ್ಥಾಪಿಸಿ ದರು. ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಚಳುವಳಿಯನ್ನು ಮುನ್ನಡೆಸಲು ಹಾ ಗೂ ಸಾಮಾಜಿಕ ನ್ಯಾಯ, ಸಮಾನತೆ,ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆ, ಸಂವಿಧಾನದ ಆಶಯಗ ಳನ್ನು ರಕ್ಷಿಸುವ ಹಿನ್ನಲೆಯಲ್ಲಿ ನೂತನ ಸಂಘಟನೆ ಸ್ಥಾಪಿಸ ಲಾಯಿತು.ಈ ನೂತನ ಸಂ ಘಟನೆಯನ್ನು ಕರ್ನಾ ಟಕ ಪ್ರಜಾಸ ತ್ತಾತ್ಮಕ ರಂಗ ಎಂಬ ಹೆಸರನ್ನು ಒಕ್ಕೊರ ಲ ಅಭಿಪ್ರಾಯದಿಂದ ಅಂ ತಿಮಗೊಳಿಸಲಾಯಿತು. ಸಂಘಟನೆಯ ಸಂಚಾಲಕರ ಸಮಿತಿ ಆಯ್ಕೆ ನಡೆಯಿ ತು,ಗೌರವ ಸಂಚಾಲಕರಾ ಗಿ ಎಚ್ ಎನ್ ಬಡಿಗೇರ್, ಖಾಜಾಸಾಬ್ ಬುಡ್ಡನ್ನಿ, ಕರೇಗೌಡ ಕುರಕುಂ ದಿ,ಮಾರುಫ,ಡಾ. ಬಸವರಾಜ ಪಿ ನಾಯಕ, ಹನುಮಂತಪ್ಪ ಮುದ್ದಾಪುರ,ಆಯ್ಕೆಗೊಂಡರು.

ಪ್ರಧಾನ ಸಂಚಾಲಕರಾಗಿ ನಾರಾಯಣ ಬೆಳಗುರ್ಕಿ ,ಸಂಚಾಲಕ ಮಂಡಳಿ ಸದಸ್ಯರಾಗಿ ಹಂಸ ರಾಜ್ ಮಾಡಿಸಿರವಾರ , ಡಾ.,ಎಂ ಎಸ್ ಹಂಚಿನಾಳ,ಎಂ. ಗಂಗಾಧರ, ಶಂಕರ ವಾಲಿ ಕಾರ, ರಮೇಶ್ ಹಲಗಿ, ಬಿ ಎನ್ ಯರದಿಹಾಳ, ಭೀಮಣ್ಣಬೆಳಗುರ್ಕಿ , ಮೌನೇಶ್ ಜಾಲವಾಡಗಿ ಯವರನ್ನು ಸಂಚಾಲಕ ಮಂಡಳಿಗೆ ಆಯ್ಕೆ ಮಾಡ ಲಾಯಿತು.

**ಕಾರ್ಯಕಾರಿ ಸಮಿತಿ :** ಸಿದ್ಧಪ್ಪ ಎಚ್ ಭಾವಿಮನಿ ಅಡ್ವೊಕೇಟ್, ಅಮೀನ್ ಪಾಷಾ ದಿದಗಿ , ಬಸವರಾಜ್ ಗೋಡಿಹಾಳ, ಹನುಮ ಂತಪ್ಪ ಗೋಮಾರ್ಸಿ,ಬಸವರಾಜ ಎಕ್ಕಿ, ಬಸವರಾಜ್ ಚಿಗರಿ, ರಾಜು, ನೂರ್ ಮಹಮ್ಮದ್ ಅವರನ್ನು ಆಯ್ಕೆ ಮಾಡ ಲಾಯಿತು.

# ಕನ್ನಡ ಚಲನಚಿತ್ರರಂಗದ ಶ್ರೇಷ್ಠ ನಟ ಶಂಕರ್ ನಾಗ್ ಕಸಾಪ ಅಧ್ಯಕ್ಷ ಎಚ್.ಶಿವರಾಜ್

ಯುವ ಮಾರ್ಗ ಸುದ್ದಿ



**ದೇವದುರ್ಗ,ನ.10**–ದೇವದುರ್ಗ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಕಲ್ಯಾಣ ಕರ್ನಾಟಕ ಆಟೋ ವಾಹನ ಚಾಲಕರ ಸಂಘ ಹಾಗೂ ಕರ್ನಾಟಕ ರಕ್ಷಣಾ ಸೇನೆ ಕನ್ನಡ ಪರ ಸಂಘ ಸಂಸ್ಥೆಗಳಿಂದ ಶಂಕರ್‌ನಾಗ್ ಅಭಿಮಾನಿಗಳ ಬಳಗದಿಂದ ಸಾರ್ವಜನಿಕ ಆಸ್ಪತ್ರೆ ಹತ್ತಿರ ಇರುವ ಆಟೋ ನಿಲ್ದಾಣದಲಿ ದಿವಂಗತ ಕರಾಟೆ ಕಿಂಗ್ ಶಂಕರ್ ನಾಗ್ ರವರ 71ನೇ ಹುಟ್ಟು ಹಬ್ಬವನ್ನು ಅವರ ಅಭಿಮಾನಿಗಳ ಬಳಗವು ಕೇಕ್ ಕತ್ತರಿಸಿ ಅವರು ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸುವ ಮುಖಾಂತರ ಆಚರಿಸಲಾಯಿತು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಚ್. ಶಿವರಾಜ್ ಕನ್ನಡ ಚಲನಚಿತ್ರರಂಗ ಕಂಡ ಅಪರೂಪದ ವಿಭಿನ್ನ ವೈಶಿಷ್ಟತೆ ನಟ ಶಂಕರ್ ನಾಗ್ ತಮ್ಮ ಅಭಿನಯಗಳ ಮೂಲಕ ಕನ್ನಡ ನಾಡಿನ ಚಿತ್ರ ರಸಿಕರ ಹೃದಯದಲ್ಲಿ ಮನೆ ಮಾತಾಗಿದ್ದಾರೆ ಇವರ ಅಭಿನಯಿಸಿ ಇವರಿಗೆ ಕೀರ್ತಿ ತಂದ ಚಲನಚಿತ್ರಗಳು ಒಂದಾನೊಂದು ಕಾಲದಲ್ಲಿ ಅಭಿನಯಕ್ಕೆ ಶ್ರೇಷ್ಠ ನಟ ರಾಷ್ಟ್ರೀಯ ಪುರಸ್ಕಾರ ಮಿಂಚಿನ ಓಟ ಆಕ್ಸಿಡೆಂಟ್ ಇವರ ಅಭಿನಯಿಸಿದ ಚಿತ್ರಗಳಿಗೆ ಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡಿದ್ದಾರೆ ಇದರ ಜೊತೆಗೆ ಎಸ್ ಪಿ ಸಾಂಗ್ಲಿಯಾನ ಆಟೋರಾಜ ಹೊಸ ಜೀವನ ಪ್ರೀತಿ ಮಾಡು ತಮಾಷೆ ನೋಡು ಗೆದ್ದ ಮಗ ಬೇಟೆ ಲಾರಿ ಡ್ರೈವರ್ ಮುನಿಯನ ಮಾದರಿ ಸೀತಾರಾಮ್ ಮೂಗನ ಸೇಡು ಚೆಲ್ಲಿದ ರಕ್ತ ಸುಂದರಕಾಂಡ ಡಾಕ್ಟರ್ ರಾಜಕುಮಾರ್ ಜೊತೆ ಅಪೂರ್ವ ಸಂಗಮ ಹಾಗೂ ವರನಟ ಡಾಕ್ಟರ್ ರಾಜಕುಮಾರ್ ಅಭಿನಯಿಸಿದ ಒಂದು ಮುತ್ತಿನ ಕಥೆ ಚಲನಚಿತ್ರವನ್ನು ನಿರ್ದೇಶನ ಮಾಡಿದ್ದಾರೆ ನೋಡಿ ಸ್ವಾಮಿ ನಾವಿರೋದು ಹೀಗೆ ಹತ್ತಲವಾರು ಕಲಾತ್ಮಕ ಸಾಮಾಜಿಕ ಮನೋರಂಜನೆಯ ಚಿತ್ರಗಳಲ್ಲಿ ಅಭಿನಯಿಸಿ ಕನ್ನಡಿಗರ ಹೃದಯ ಅಂತರಾಳದಲ್ಲಿ ಮನೆ ಮಾಡಿದ್ದಾರೆ ಇವರ ಸಹೋದರರಾದ ಅನಂತನಾಗ್ ಅವರು ಕನ್ನಡ ಚಿತ್ರರಂಗ ಅಪಾರ ಸೇವೆ ಸಲ್ಲಿಸಿದ್ದಾರೆ ಇವರು ಸೇವೆ ಗುರುತಿಸಿ ಕೇಂದ್ರ ಸರ್ಕಾರವು ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ ಇವರಿಬ್ಬರ ಚಲನಚಿತ್ರ ಸೇವೆ ಅಪೂರ್ವ ಅಮೋಘ ವಿಸ್ಮರಣೆಯ ವರನಟ ಡಾ. ರಾಜಕುಮಾರ್ ವಿಷ್ಣುವರ್ಧನ್ ರೆಬೆಲ್ ಸ್ಟಾರ್ ಅಂಬರೀಶ್ ನಂತರ ಸ್ಥಾನದಲ್ಲಿ ಶಂಕರ್ ನಾಗ್ ನಮಗೆ ಪ್ರತಿಬಿಂಬಿಯಾಗಿದ್ದಾರೆ ಇವರ ಸ್ಥಾನವನ್ನು ಯುವ ನಟರು ತುಂಬಿಲ್ಲ ತಮ್ಮ ಅಲ್ಪ ಅವಧಿಯ ಒಂದುವರೆ ದಶಕಗಳ ಕಾಲದಲ್ಲಿ 80ಕ್ಕೆ ಹೆಚ್ಚು ಚಲನಚಿತ್ರ ಗಳಲ್ಲಿ ನಟಿಸಿದ್ದಾರೆ ಮೆಟ್ರೋ ರೈಲ್ ಯೋಜನೆ ಶಂಕರ್ ನಾಗ್ ಅವರ ಕನಸಾಗಿತ್ತು ಸರ್ಕಾರ ಇಂದು ಬೆಂಗಳೂರು ಮೆಟ್ರೋ ರೈಲ್ವೆ ಹೆಸರು ನಾಮಕರಣ ಮಾಡಬೇಕೆಂದು ಅಭಿಮಾನಿಗಳು ಒತ್ತಾಯಿಸುತ್ತಿದ್ದಾರೆ ಮಾಲ್ಗುಡೇಸ್ ರಾಷ್ಟ್ರೀಯ ಮಟ್ಟದಲ್ಲಿ ಈ ಧಾರವಾಹಿ ಶಂಕರ್ ನಾಗ್ ಅವರ ನಟನೆ ಕಲ ಕೌಶಲ್ಯಕ್ಕೆ ಹೆಸರು ಕೀರ್ತಿ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ ಇಂಥ ನಟರು ಬಾಳ ಅಪರೂಪ ವಿರಳ ಕನ್ನಡ ಚಲನಚಿತ್ರ ಕಂಡಿರುವ ಕೆಲವೇ ನಟರಲ್ಲಿ ಶಂಕರ್ ನಾಗ್ ಯುವಕರ ಕಣ್ಮಣಿಯಾಗಿ ವಿಶಿಷ್ಟ ಸ್ಥಾನ ಪಡೆದಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ಗೌಡಪ್ಪ ಮಾಯಪ್ಪ ಯಂಕಪ್ಪ ಶರಣಪ್ಪ ಮುದುರಂಗ ಪೂಜಾರಿ ಮುರಳಿ ಶಿವು ರಾಘವೇಂದ್ರ ಕುಮಾರ್ ನಾಗರಾಜ್ ಬಸವರಾಜ್ ರಾಮು ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಟಿ . ಜಯರಾಜ್ ಯಂಕಪ್ಪ ರಾಮಸ್ವಾಮಿ ಪೂಜಾರಿ ತಿರುಪತಿ ಚೇರ್ಮನ್ ಹಾಡುಗಾರ ಸೇರಿದಂತೆ ವಿವಿಧ ಸಂಘಟನೆ ಕನ್ನಡ ಪರ ಸಂಘ ಸಂಸ್ಥೆಗಳ ಮುಖಂಡರು ಶಂಕರ್ ನಾಗ್ ಅಭಿಮಾನಿಗಳ ಬಳಗ ಆಟೋ ಚಾಲಕರ ಪದಾಧಿಕಾರಿಗಳು ಸದಸ್ಯರು ಚಿತ್ರ ಪ್ರೇಮಗಳು ಚಿತ್ರ ರಸಿಕರು ಕನ್ನಡ ಅಭಿಮಾನಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಶಂಕರ್ ನಾಗ್ ಅವರ ಹುಟ್ಟುಹಬ್ಬ ಕಾರ್ಯಕ್ರಮ ಯಶಸ್ವಿಗೊಳಿಸಿದರು

# ಶರಣಬಸವ ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ಐಇಇಇ ಕಾರ್ಯಾಗಾರ



**ಕಲಬುರಗಿ,ನ.10**– ಇನ್ಸ್ಟಿಟ್ಯೂಟ್ ಆಫ್ ಇಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ವಿಭಾಗದ (ಐಇಇಇ) ಐಇಇಇ ದಿನಾಚರಣೆ 2025 ಮತ್ತು ಖಇಇಇ ಉತ್ತರ ಕರ್ನಾಟಕ ಉಪವಿಭಾಗ ವಿದ್ಯಾರ್ಥಿ ಕಾಂಗ್ರೆಸ್– 'ಸೃಜನಂ' ಎರಡು ದಿನಗಳ ಕಾರ್ಯಕ್ರಮವನ್ನು ಶರಣಬಸವ ವಿಶ್ವವಿದ್ಯಾಲಯದಲ್ಲಿ ಭಾನುವಾರ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮವು ಕೃತಕ ಬುದ್ಧಿಮತ್ತೆ ಚಾಲಿತ ಸಂಶೋಧನೆ, ಪೇಟೆಂಟ್ ಫೈಲಿಂಗ್, ರೋಬೊಟಿಕ್ ಆಪರೇಟಿಂಗ್ ಸಿಸ್ಟಮ್ ತರಗತಿಗಳನ್ನು ಒಳಗೊಂಡ ಬಹು-ಡೊಮೇನ್ ತಾಂತ್ರಿಕ ಪ್ರಾಯೋಗಿಕ ಕಲಿಕೆ ಒಳಗೊಂಡಿದೆ.

ತಮ್ಮ ಉದ್ಘಾಟನಾ ಭಾಷಣದಲ್ಲಿ ಮಾತನಾಡಿದ ಡಾ. ದೇವೇಂದ್ರ ಗೌಡ ಅವರು ಇಂಟರ್‌ಶಿಪಗಳು, ಕೈಗಾರಿಕಾ ಯೋಜನೆಗಳು ಮತ್ತು ವೃತ್ತಿಪರ ನೆಟ್ವರ್ಕ್ ಮೂಲಕ ಬಲವಾದ ಪ್ರೊಫೈಲ್ ರಚಿಸುವಲ್ಲಿ ಐಇಇಇ ಸದಸ್ಯರಾಗಿರುವ ವಿದ್ಯಾರ್ಥಿಗಳ ಪ್ರಯೋಜನಗಳ ಬಗ್ಗೆ ತಿಳಿಸಿದರು. ಈ ವಿದ್ಯಾರ್ಥಿ ಕಾಂಗ್ರೇಸ್‌ಗೆ ಆತಿಥ್ಯ ನೀಡಿದ ಶರಣಬಸವ ವಿಶ್ವವಿದ್ಯಾಲಯವನ್ನು ಅಭಿನಂದಿಸಿದ ಅವರು, ವಿದ್ಯಾರ್ಥಿಗಳ ಕೌಶಲ್ಯವನ್ನು ಬಲಪಡಿಸಲು ಅಗತ್ಯವಿರುವ ಎಲ್ಲಾ ರೀತಿಯ ಸಹಾಯವನ್ನು ಐಇಇಇ ನೀಡುತ್ತದೆ ಎಂದರು. ಐಇಇಇ 50ನೇ ವರ್ಷವನ್ನು ಪ್ರವೇಶಿಸಿದೆ ಮತ್ತು ರಾಜ್ಯದಾದಂತ್ಯ ಹೆಚ್ಚಿನ ಸದಸ್ಯತ್ವ ಶಕ್ತಿಯನ್ನು ಹೊಂದಿದೆ. ಈಗಾಗಲೇ ಐಇಇಇ ಕರ್ನಾಟಕ 21,700 ಹೊಸ ಸದಸ್ಯರನ್ನು ನೋಂದಾಯಿಸಿಕೊಂಡಿದೆ. ಈ ವರ್ಷದ ಕೊನೆಯ ವೇಳೆಗೆ 25,000 ಹೊಸ ಸದಸ್ಯತ್ವದ ಗುರಿಯನ್ನು ಸಾಧಿಸಲಿದೆ ಎಂದರು.ಡಾ. ಅಭಿಷೇಕ ದೇಶಮುಖ ಅವರು ಮಾತನಾಡಿ, ಐಇಇಇ ಉತ್ತರ ಕರ್ನಾಟಕ ಉಪವಿಭಾಗವು ತನ್ನ ಐದು ವರ್ಷಗಳ ಅಸ್ತಿತ್ವದಲ್ಲಿ ಅನೇಕ ಪ್ರಮುಖ ಘಟನೆಗಳನ್ನು ನಡೆಸಿದೆ ಮತ್ತು ಈ ವರ್ಷ ಶರಣಬಸವ ವಿಶ್ವವಿದ್ಯಾಲಯದಲ್ಲಿ "ಸೃಜನಂ" ಎಂಬ ಹೊಸ ಪ್ರಮುಖ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು. ವಿದ್ಯಾರ್ಥಿ ಸಮುದಾಯವು ತಮ್ಮ ಸಹಪಾಠಿಗಳೊಂದಿಗೆ ಸಂಪರ್ಕ ಸಾಧಿಸಿಕೊಳ್ಳಲು ಮತ್ತು ಜ್ಞಾನವನ್ನು ಹಂಚಿಕೊಳ್ಳಲು ಒಂದು ವೇದಿಕೆಯನ್ನು ಒದಗಿಸಲು ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು.

ಶರಣಬಸವ ವಿಶ್ವವಿದ್ಯಾಲಯದ ಡೀನ್ ಡಾ. ಲಕ್ಷ್ಮಿ ಪಾಟೀಲ್ ಮಾಕಾ ಅವರು ತಮ್ಮ ಸ್ವಾಗತ ಭಾಷಣದಲ್ಲಿ, ಖಇಇಇ ಐಇಇಇ ವಿದ್ಯಾರ್ಥಿ ಶಾಖೆಗಳು ಪ್ರಾರಂಭಿಸಿದ ವಿವಿಧ ಚಟುವಟಿಕೆಗಳನ್ನು ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೇಲೆತ್ತಿ ತೋರಿಸಲು ಇದು ಹೇಗೆ ಅಗತ್ಯವಾಗುವುದು ಎಂದು ಹೇಳಿದರು.

# ನವೆಂಬರ್ 11ರಂದು ಜಿಲ್ಲಾಡಳಿತದಿಂದ ಒನಕೆ ಓಬವ್ವ ಜಯಂತಿ

**ರಾಯಚೂರು,ನ.10**–ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ವೀರರಾಣಿ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ನವೆಂಬರ್ 11ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ

## ಇಂದು ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಿಗೆ ಅಭಿನಂದನಾ ಸಮಾರಂಭ, ಕಾರ್ಯಾಗಾರ:

**ರಾಯಚೂರು,ನ.10**– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಹಾಗೂ ರಾಯಚೂರು ಜಿಲ್ಲಾ ಘಟಕ ವತಿಯಿಂದ, ಕ್ರಿಯಾಶೀಲ ರಾಜ್ಯಾಧ್ಯಕ್ಷರಾದ ಸಿ.ಎಸ್. ಷಡಾಕ್ಷರಿ ಅವರಿಗೆ ಅಭಿನಂದನಾ ಸಮಾರಂಭ ಹಾಗೂ ಸಂಘದ ವಾರ್ಷಿಕ ಸಾಮಾನ್ಯ ಸಭೆಯು ನವೆಂಬರ್ 11ರಂದು ಬೆಳಗ್ಗೆ 10 ಗಂಟೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಕೃಷ್ಣಾ ಶಾವಂತಗೇರಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಹಾನಗರ ಪಾಲಿಕೆಯ ಅಧ್ಯಕ್ಷರು, ಜಿಲ್ಲಾಧಿ ಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮಹಾ ನಗರ ಪಾಲಿಕೆ ಆಯುಕ್ತರು, ವಿ.ವಿ.ಗಳ ಕುಲಪತಿಗಳು ಸೇರಿದಂತೆ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಜ್ಯ ನೌಕರರ ಸಂಘದ ಪ್ರಮುಖ ಪದಾಧಿಕಾರಿಗಳು ಮತ್ತು ವಿವಿಧ ಘಟಕಗಳ ಅಧ್ಯಕ್ಷರು ವಿಶೇಷ ಆಹ್ವಾನಿತರಾಗಿದ್ದಾರೆ.

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಹಿತದೃಷ್ಟಿಯಿಂದ ಆರೋಗ್ಯ ಸಂಜೀವಿನಿ ಯೋಜನೆ ಮತ್ತು ಎಚ್.ಆರ್.ಎಂ.ಎಸ್. 2.0 ಯೋಜನೆ ಕುರಿತು ವಿಶೇಷ ಕಾರ್ಯಗಾರ ಏರ್ಪಡಿಸಲಾಗಿದ್ದು, ನೌಕರರಿಗೆ ಹೊಸ ವ್ಯವಸ್ಥೆಗಳ ಬಗ್ಗೆಯು ತಾಂತ್ರಿಕ ಮಾರ್ಗದರ್ಶನ ನೀಡಲಾಗುತ್ತದೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನೌಕರರಿಗೆ ಓಓಡಿ ಸೌಲಭ್ಯ ಇರುತ್ತದೆ ಆದ್ದರಿಂದ ರಾಯಚೂರು ಜಿಲ್ಲಾ ಮಟ್ಟದ ಅಧಿಕಾರಿ ಗಳು ಮತ್ತು ಸಮಸ್ತ ಸರಕಾರಿ ನೌಕರ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸ ಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಟೋದಲ್ಲಿ ಹೋಗುತ್ತಿದ್ದಾಗ 1.25 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು

**ಕಲಬುರಗಿ,ನ.10**–ಆಟೋದಲ್ಲಿ ಹೋಗುತ್ತಿದ್ದಾಗ ಮಹಿಳೆಯೊಬ್ಬರ ಬ್ಯಾಗಿನಲ್ಲಿದ್ದ 1.25 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಕಳವಾದ ಘಟನೆ ನಗರದಲ್ಲಿ ನಡೆದಿದೆ.ವಿಜಯಪುರ ನಗರದ ಖುರೇಷಿ ಮೋಹಲ್ಲಾ ಕಟಗರ ಓಣಿಯ ಶಹನಾಜ್ ಬೇಗಂ ಎಂಬುವವರ ಬ್ಯಾಗಿನಲ್ಲಿದ್ದ ಚಿನ್ನಾಭರಣ ಕಳವಾಗಿದೆ.ಇವರು ಕಲಬುರಗಿಯ ಬಂದೇನವಾಜ್ ಕಾಲೋನಿಯಲ್ಲಿರುವ ಸಂಬಂಧಿಕರ ಮದುವೆ ನಿಶ್ಚಿತಾರ್ಥ ಕಾರ್ಯಕ್ರಮಕ್ಕೆಂದು ನಾದಿನ ಶಾಕೀರ ಬೇಗಂ ಮತ್ತು ಮಕ್ಕಳೊಂದಿಗೆ ವಿಜಯಪುರದಿಂದ ಕಲಬುರಗಿಗೆ ಆಗಮಿಸಿ ನಗರದ ರಾಮ ಮಂದಿರ ಸರ್ಕಲ್ ಹತ್ತಿರ ಇಳಿದು ಸೇಡಂ ರಿಂಗ್ ರೋಡ್‌ಗೆ ಹೋಗಲು ಆಟೋ ಹತ್ತಿದ್ದಾರೆ. ಈ ವೇಳೆ ಇಬ್ಬರು ಅಪರಿಚಿತ ಮಹಿಳೆಯರು ಆಟೋ ಹತ್ತಿದ್ದಾರೆ. ಇವರು ಸೇಡಂ ರಿಂಗ್ ರೋಡ್ ಬಳಿ ಇಳಿದು ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿದ್ದ 75 ಸಾವಿರ ರೂ.ಮೌಲ್ಯದ 15 ಗ್ರಾಂ.ಬಂಗಾರದ ನೆಕ್ಲೆಸ್ ಮತ್ತು 50 ಸಾವಿರ ರೂ.ಮೌಲ್ಯದ ತಲಾ 5 ಗ್ರಾಂ.ಬಂಗಾರದ 2 ಸುತ್ತುಂಗುರಗಳು ಕಳವಾಗಿದ್ದು ಗಮನಕ್ಕೆ ಬಂದಿದೆ. ಈ ಬಗ್ಗೆ ಅವರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H